# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಮೇ 05, 2021

ಸಂಪುಟ : 47 ಸಂಚಿಕೆ : 352 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಚುನಾವಣೆ ನಂತರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ, ಮೇ 4 – 18 ದಿನಗಳ ನಂತರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಏರಿಕೆ ಮಾಡಲಾಗಿದೆ. ಪೆಟ್ರೋಲ್ ಬೆಲೆ ಲೀಟರ್‌ಗೆ 15 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 18 ಪೈಸೆಯಷ್ಟು ಏರಿಕೆ ಮಾಡಲಾಗಿದೆ.

ಚುನಾವಣೆಯ ಹಿನ್ನೆಲೆಯಲ್ಲಿ ಸರ್ಕಾರಿ ತೈಲ ಕಂಪನಿಗಳು ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್ ಬೆಲೆ ಏರಿಕೆಯನ್ನು ತಡೆದಿದ್ದವು.

ಚುನಾವಣೆ ಪೂರ್ಣಗೊಂಡ ನಂತರ ತೈಲ ಕಂಪನಿಗಳು ಬೆಲೆ ಪರಿಷ್ಕರಣೆಗೆ ಮತ್ತೆ ಚಾಲನೆ ನೀಡಿವೆ.

## ರೆಮ್ಡಿಸಿವಿರ್ ಉತ್ಪಾದನೆ ಹೆಚ್ಚಳ

ನವದೆಹಲಿ, ಮೇ 4 – ರೆಮ್ಡಿಸಿವಿರ್ ಔಷಧದ ಉತ್ಪಾದನೆ ಕಳೆದ ತಿಂಗಳಲ್ಲಿ ಮೂರು ಪಟ್ಟು ಹೆಚ್ಚಾಗಿ 1.05 ಕೋಟಿ ಬಾಟಲಿಗಳಿಗೆ ತಲುಪಿದೆ ಎಂದು ಕೇಂದ್ರ ರಾಸಾಯನಿಕ ಖಾತೆ ಅಧೀನ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ.

ಕಳೆದ 1 ತಿಂಗಳಲ್ಲಿ ಒಟ್ಟಾರೆ 1.05 ಕೋಟಿ ಬಾಟಲಿ ಗಳಷ್ಟು ಔಷಧಿ ಉತ್ಪಾದಿಸಲಾಗಿದೆ. ಅದಕ್ಕೂ ಮುಂಚಿನ ತಿಂಗಳಲ್ಲಿ 37 ಲಕ್ಷ ಬಾಟಲಿ ಔಷಧಿ ಉತ್ಪಾದಿಸ ಲಾಗಿತ್ತು ಎಂದು ಮಾಂಡವೀಯ ತಿಳಿಸಿದ್ದಾರೆ.

ದೇಶದ 57 ಘಟಕಗಳಲ್ಲಿ ಈಗ ರೆಮ್ಡಿಸಿವಿರ್ ಉತ್ಪಾದಿಸಲಾಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ಔಷಧಿ ಪೂರೈಸಲಿದ್ದೇವೆ ಎಂದು ಹೇಳಿದ್ದಾರೆ.

## ಕಸದ ವಾಹನದಲ್ಲಿ ಕೊರೊನಾ ಮೃತನ ಶವ ರವಾನೆ

ಔರಂಗಾಬಾದ್, ಮೇ 4 – ಆಂಬ್ಯುಲೆನ್ಸ್ ಲಭ್ಯವಾಗದ ಹಾಗೂ ಖಾಸಗಿ ವಾಹನಗಳು ಶವ ಸಾಗಿಸಲು ನಿರಾಕರಿಸಿದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ಒಸ್ಮಾನಾಬಾದ್ ಜಿಲ್ಲೆಯಲ್ಲಿ ಕಸದ ವಾಹನದಲ್ಲಿ ಕೋವಿಡ್‌ನಿಂದ ಮೃತಪಟ್ಟು ವ್ಯಕ್ತಿಯ ಶರೀರವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾಗಿದೆ.

ಕಿನ್ಹಿ ಹಳ್ಳಿಯ ವ್ಯಕ್ತಿಯೊಬ್ಬರು ಪಕ್ಕದ ತೆರ್ ಹಳ್ಳಿಯಲ್ಲಿರುವ ವೈದ್ಯರ ಬಳಿ ತೆರಳಿದ್ದರು. (3ನೇ ಪುಟಕ್ಕೆ)

# ದುಡ್ಡು ಕೊಟ್ಟವರಿಗೆ ಮಾತ್ರ ಆಸ್ಪತ್ರೆ ಬೆಡ್

## ಸಾವಿನ ಮನೆಯಲ್ಲೂ ಅಮಾನವೀಯ ದಂಧೆ

ಬೆಂಗಳೂರು, ಮೇ 4 - ಕೊರೊನಾ ಎರಡನೇ ಅಲೆ ತಾರಕಕ್ಕೇರಿ ಸ್ಮಶಾನಗಳಲ್ಲಿ ಹೆಣ ಸುಡಲು ಜಾಗ ಕಷ್ಟವಾಗಿರುವ ಸಂದರ್ಭದಲ್ಲಿ, ಆಸ್ಪತ್ರೆಯ ಬೆಡ್ ಮಾರಿಕೊಳ್ಳುವ ದೊಡ್ಡ ದಂಧೆಯನ್ನು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಬಯಲಿಗೆಳೆದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಆರೋಪಗಳ ಕುರಿತು ದಾಖಲೆ ಬಿಡುಗಡೆ ಮಾಡಿ ಮಾತನಾಡಿರುವ ಅವರು, ಬಿಬಿಎಂಪಿಯ ಕೋವಿಡ್ ವಾರ್ ರೂಂನಲ್ಲಿ ಸೋಂಕಿತ ಲಕ್ಷಣ ರಹಿತರ ಹೆಸರಿನಲ್ಲಿ ಬೆಡ್ ಬುಕ್ ಮಾಡಿ ಅದನ್ನು ಬೇರೆಯವರಿಗೆ ಕೊಡುವ ದಂಧೆ ನಡೆಯುತ್ತಿದೆ. ಈ ರೀತಿ 4 ಸಾವಿರಕ್ಕೂ ಹೆಚ್ಚು ಬೆಡ್‌ಗಳ ಮಾರಾಟದ ದಂಧೆ ನಡೆದಿರುವುದು ಕಂಡು ಬಂದಿದೆ ಎಂದಿದ್ದಾರೆ.



**ದಾಖಲೆ ಸಮೇತ ಅವ್ಯವಹಾರ ಬಯಲಿಗೆಳೆದ ಸಂಸದ ತೇಜಸ್ವಿ ಸೂರ್ಯ**

ಒಬ್ಬ ವ್ಯಕ್ತಿಯ ಹೆಸರಿನಲ್ಲೇ 12ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಬೇರೆ ಬೇರೆ ದಿನ ಬೆಡ್ ಬುಕ್ ಮಾಡಲಾಗಿದೆ. ಈ ರೀತಿ ಬುಕ್ ಮಾಡಿದ ಬೆಡ್‌ಗಳನ್ನು ರಾತ್ರೋರಾತ್ರಿ ಬೇರೆಯವರಿಗೆ ಕೊಡಲಾಗುತ್ತಿದೆ. ಈ ರೀತಿಯ ದಂಧೆ ನಡೆಸಿದ ಅಧಿಕಾರಿಗಳು, ಏಜೆಂಟರು, ಆರೋಗ್ಯ ಮಿತ್ರರು ಹಾಗೂ ಖಾಸಗಿ ಆಸ್ಪತ್ರೆಯವರು ಯಾರೇ ಇದ್ದರೂ ಜೈಲಿಗೆ ಅಟ್ಟಬೇಕು ಎಂದವರು ಕಿಡಿ ಕಾರಿದ್ದಾರೆ.

ಈ ಅಕ್ರಮ ದಂಧೆ ನಡೆಸಿದವರನ್ನು ರಣಹದ್ದುಗಳು ಎಂದು ತರಾಟೆಗೆ ತೆಗೆದುಕೊಂಡ ಸೂರ್ಯ, ಇದು ಭ್ರಷ್ಟಾಚಾರ ಅಲ್ಲ ಕೊಲೆ ಎಂದು ಬಣ್ಣಿಸಿದರು.

ಆಕ್ಸಿಜನ್ ಬೆಡ್‌ಗಳ ಸಂಖ್ಯೆಯನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸಾಕಷ್ಟು ಹೆಚ್ಚಿಸಲಾಗಿದೆ. ಆದರೆ, ಅಧಿಕಾರಿಗಳು ಹಾಗೂ ಏಜೆಂಟರ ಕಾರಣದಿಂದಾಗಿ ಜನರಿಗೆ ಈ ಸೌಲಭ್ಯ ತಲುಪುತ್ತಿಲ್ಲ ಎಂದು ಆರೋಪಿಸಿದರು.

ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಮಾತನಾಡಿ, ಕೊರೊನಾಗೆ ಸಿಲುಕಿದವರಿಂದ ಅಮಿತ್ ಎಂಬ ವ್ಯಕ್ತಿ 25 ಸಾವಿರ ರೂ.ಗಳನ್ನು ಗೂಗಲ್ ಪೇ ಮೂಲಕ ಪಡೆದು ಬೆಡ್ ನೀಡಿರುವುದು ದಾಖಲೆ ಸಮೇತ ಬೆಳಕಿಗೆ ಬಂದಿದೆ. ಈ ವ್ಯಕ್ತಿಯನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದಿಂದ 780 ಬೆಡ್‌ಗಳು ಬಂದರೂ ಅವುಗಳು ಬಳಕೆಯಾಗುತ್ತಿಲ್ಲ. ಆಕ್ಸಿಜನ್ (3ನೇ ಪುಟಕ್ಕೆ)

### ಧರಣಿ ನಡೆಸುವ ಎಚ್ಚರಿಕೆ ನಂತರ ಮಾಹಿತಿ

ಕೋ ವಿಡ್ ವಾರ್ ರೂಂ ಕಾರ್ಯ ನಿರ್ವಹಣೆ ಕುರಿತ ಮಾಹಿತಿ ಪಡೆಯಲು ಸಂಸದನಾದ ನಾನೇ ಪರದಾಡಬೇಕಾಯಿತು. ಹತ್ತಾರು ಸಾರಿ ಕೇಳಿದರೂ ಮಾಹಿತಿ ಕೊಟ್ಟಿರಲಿಲ್ಲ. ಮಾಹಿತಿ ಕೊಟ್ಟರೂ ಅರೆಬರೆಯಾಗಿ ಕೊಡುತ್ತಿದ್ದರು ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

ನಿನ್ನೆ ರಾತ್ರಿ 2 ಗಂಟೆಗೆ ಉನ್ನತ ಅಧಿಕಾರಿಯೊಬ್ಬರಿಗೆ ಕರೆ ಮಾಡಿ, ಇನ್ನು ಅರ್ಧ ಗಂಟೆಯಲ್ಲಿ ಮಾಹಿತಿ ಕೊಡದಿದ್ದರೆ (3ನೇ ಪುಟಕ್ಕೆ)

### ಬ್ಲಾಕ್ ದಂಧೆಯ ವಿಧಾನ

ಬಿಬಿಎಂಪಿ ಕೋವಿಡ್ ವಾರ್ ರೂಂ ವ್ಯವಸ್ಥೆಯ ಪ್ರಕಾರ ಖಾಲಿ ಇರುವ ಬೆಡ್‌ಗೆ ಯಾರಾದರೂ ಬುಕ್ ಮಾಡಿದರೆ ಅವರು 12 ಗಂಟೆಯವರೆಗೂ ಆಸ್ಪತ್ರೆಗೆ ದಾಖಲಾಗಲು ಸಮಯ ಇರುತ್ತದೆ. ಅಲ್ಲಿಯವರೆಗೆ ಬೇರೆ ಯಾರಿಗೂ ಈ ಬೆಡ್ ಕೊಡುವುದಿಲ್ಲ.

ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರರು ಯಾವುದಾದರೂ ಬೆಡ್ ಖಾಲಿ ಆದ ತಕ್ಷಣ ಅವ್ಯವಹಾರದಲ್ಲಿ ಭಾಗಿಯಾಗಿರುವ ವಾರ್ ರೂಂ ಸಿಬ್ಬಂದಿಯೊಬ್ಬರಿಗೆ ತಿಳಿಸುತ್ತಾರೆ.

ಅವರು ಲಕ್ಷಣ ರಹಿತ ಸೋಂಕು ಹೊಂದಿರುವ (3ನೇ ಪುಟಕ್ಕೆ)

### ಎಷ್ಟೇ ದೊಡ್ಡವರಿದ್ದರೂ ಬಿಡುವುದಿಲ್ಲ



ಸಂಸದ ತೇಜಸ್ವಿ ಸೂರ್ಯ ಅವರು ದೊಡ್ಡ ಪ್ರಮಾಣದ ಅವ್ಯವಹಾರ ಬಯಲು ಮಾಡಿದ್ದಾರೆ. ಅವರಿಂದ ನಾನು ಮಾಹಿತಿ ಪಡೆಯುತ್ತಿದ್ದು, ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ. ಹಗರಣದಲ್ಲಿ ಭಾಗಿಯಾದವರು ಎಷ್ಟೇ ದೊಡ್ಡವರಿದ್ದರೂ ಬಿಡುವುದಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ. ಹಗರಣದಲ್ಲಿ ಭಾಗಿಯಾದವರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು (3ನೇ ಪುಟಕ್ಕೆ)

### ನಾಚಿಕೆಗೇಡು ಎಂದ ಕಾಂಗ್ರೆಸ್

ಬಿಜೆಪಿ ಸರ್ಕಾರದ ವೈಫಲ್ಯತೆ ಬಗ್ಗೆ ಅವರದೇ ಪಕ್ಷದ ಸಂಸದರು ಹಾಗೂ ಶಾಸಕರು ಪತ್ರಿಕಾಗೋಷ್ಠಿ ಮಾಡುತ್ತಿದ್ದಾರೆ ಎಂಬುದು ತೀರಾ ನಾಚಿಕೆಗೇಡು ಎಂದು ರಾಜ್ಯ ಕಾಂಗ್ರೆಸ್ ಲೇವಡಿ ಮಾಡಿದೆ.

ರಾಜ್ಯದಲ್ಲಿ, ಕೇಂದ್ರದಲ್ಲಿ ಹಾಗೂ ಬೆಂಗಳೂರಿನ ಬಹುತೇಕ ಸಂಸದರು ಬಿಜೆಪಿಯವರೇ. ಒಬ್ಬರಲ್ಲ, ಮೂವರು ಉಪ ಮುಖ್ಯಮಂತ್ರಿಗಳಿದ್ದಾರೆ. ಅಧಿಕಾರವೆಲ್ಲ ತಮ್ಮ ಕೈಲಿದ್ದರೂ ಪಕ್ಷದ ಸಂಸದರು ಹಾಗೂ ಶಾಸಕರು ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ಟ್ವೀಟ್ ಮೂಲಕ ತರಾಟೆಗೆ ತೆಗೆದುಕೊಂಡಿದೆ.


# ಸದ್ಯಕ್ಕೆ ಲಾಕ್‌ಡೌನ್ ಇಲ್ಲ

## 12 ರವರೆಗೂ ಎಂದಿನಂತೆ 'ಕರ್ಫ್ಯೂ' : ಮುಖ್ಯಮಂತ್ರಿ

ಬೆಂಗಳೂರು, ಮೇ 4 - ಕೊರೊನಾ ಸೋಂಕು ನಿಯಂತ್ರಿಸಲು ರಾಜ್ಯದಲ್ಲಿ ಸದ್ಯಕ್ಕೆ ಲಾಕ್‌ಡೌನ್ ಇಲ್ಲ, ಆದರೆ ಮೇ 12 ರವರೆಗೂ ಎಂದಿನಂತೆ ಕರ್ಫ್ಯೂ ಮುಂದುವರೆಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮೇ 12 ನಂತರ ಪರಿಸ್ಥಿತಿ ನೋಡಿಕೊಂಡು ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ಚಾಮರಾಜನಗರದಲ್ಲಿ ನಡೆದಿರುವ ಘಟನೆ ಬಹಳ ಬೇಸರ ತಂದಿದೆ. ಇಂತಹ ಘಟನೆಗಳು ಮರುಕಳಿಸಬಾರದೆಂಬ ಉದ್ದೇಶದಿಂದ ಸೋಂಕು ನಿರ್ವಹಣೆ ಮತ್ತು ಸೋಂಕಿತರಿಗೆ ಚಿಕಿತ್ಸೆ ಕಲ್ಪಿಸುವುದು, ಅಗತ್ಯ ಮೂಲ ಸೌಕರ್ಯ



ಕಲ್ಪಿಸುವ ಹೊಣೆಗಾರಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಲಾಗಿದೆ.

ಅವರು ನಾಳೆಯಿಂದಲೇ ತಮ್ಮ ತಮ್ಮ ಜಿಲ್ಲೆಗಳಿಗೆ ತೆರಳಿ, ಸೋಂಕು ನಿವಾರಣೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಯಾವುದೆ ಲೋಪವಾದರೂ ಅವರೇ ಹೊಣೆ ಹೊರಬೇಕಾಗುತ್ತದೆ ಎಂದು ಹೇಳಿದ್ದಾರೆ.

ಆಕ್ಸಿಜನ್ ಪೂರೈಕೆ, ರೆಮ್‌ಡಿಸಿವಿರ್ ಚುಚ್ಚುಮದ್ದು, ಲಸಿಕೆ ಕೊಡಿಸುವುದು ಹಾಗೂ ಬೆಡ್‌ಗಳ ವ್ಯವಸ್ಥೆ ಮಾಡುವ ಹೊಣೆಗಾರಿಕೆಯನ್ನು ಇವರಿಗೆ ವಹಿಸಲಾಗಿದೆ.

ಸಾರ್ವಜನಿಕರು ಸರ್ಕಾರದ ಜೊತೆ ಸಹಕರಿಸಬೇಕು. ಮೊದಲನೇ ಅಲೆಗಿಂತ ಎರಡನೇ ಅಲೆ ಮೂರು ನಾಲ್ಕು ಪಟ್ಟು ಹೆಚ್ಚಿದೆ. ಹೀಗಾಗಿ ಸರ್ಕಾರ ಏನೆಲ್ಲ ಕ್ರಮ ಕೈಗೊಳ್ಳಬೇಕೋ ಕೈಗೊಳ್ಳುತ್ತಿದೆ ಎಂದರು.

ರಾಜ್ಯಕ್ಕೆ ಅಗತ್ಯವಿರುವ ಆಕ್ಸಿಜನ್ ಮತ್ತು ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಹೆಚ್ಚು ಪ್ರಮಾಣದಲ್ಲಿ ಪೂರೈಸುವಂತೆ ಕೇಂದ್ರವನ್ನು ಕೋರಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವರು ಹಾಗೂ ಸಂಬಂಧಪಟ್ಟ ಸಚಿವರ ಜೊತೆ ಚರ್ಚಿಸಿದ್ದೇನೆ. ರಾಜ್ಯದಲ್ಲಿ ಉತ್ಪಾದನೆ ಗೊಳ್ಳುವ ಆಕ್ಸಿಜನ್ನನ್ನು ನಮಗೆ ನೀಡುವಂತೆ ಕೋರಿದ್ದೇನೆ ಎಂದವರು ತಿಳಿಸಿದರು.

ಎರಡು, ಮೂರು (3ನೇ ಪುಟಕ್ಕೆ)

## ದ್ವಿತೀಯ ಪಿಯು ಪರೀಕ್ಷೆ ಮುಂದೂಡಿಕೆ

### ಪ್ರಥಮ ಪಿಯು ಪರೀಕ್ಷೆ ರದ್ದು

ಬೆಂಗಳೂರು, ಮೇ 4 – ಕೊರೊನಾ ಸೋಂಕಿನ ಪ್ರಸರಣದ ಹಿನ್ನೆಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಮುಂದೂಡಿರುವ ರಾಜ್ಯ ಸರ್ಕಾರ ಪ್ರಥಮ ಪಿಯುಸಿ ಪರೀಕ್ಷೆಗಳನ್ನು ರದ್ದುಪಡಿಸಿ, ಮುಂದಿನ ವರ್ಷಕ್ಕೆ ಬಡ್ತಿ ನೀಡಿದೆ.

ಮೇ 24 ರಿಂದ ಜೂನ್ ಮಧ್ಯ ಭಾಗದವರೆಗೂ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ನಡೆಸಲು ದಿನಾಂಕಗಳನ್ನು ಪ್ರಕಟಿಸಿತ್ತು. ತಜ್ಞರ ಸಮಿತಿ ಇಂದು ನೀಡಿರುವ ವರದಿ ಆಧಾರದ ಮೇಲೆ ಸರ್ಕಾರ ವಿದ್ಯಾರ್ಥಿಗಳು ಮತ್ತು ಪೋಷಕರ ದೃಷ್ಟಿಯಿಂದ ಇಂತಹ ತೀರ್ಮಾನ ಕೈಗೊಂಡಿದೆ.

ಈ ವಿಷಯವನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ (3ನೇ ಪುಟಕ್ಕೆ)

### ಜೆಇಇ-ಮೇನ್ಸ್ ಮುಂದೂಡಿಕೆ

ನವದೆಹಲಿ, ಮೇ 4 – ಮೇ 24ರಿಂದ ನಡೆಯಬೇಕಿದ್ದ ಇಂಜಿನಿಯರಿಂಗ್ ಪ್ರವೇಶದ ಜೆಇಇ – ಮೇನ್ಸ್ ಪರೀಕ್ಷೆಯನ್ನು ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಾದ (ಎನ್.ಟಿ.ಎ.) ತಿಳಿಸಿದೆ.

ಈ ಹಿಂದೆ ಏಪ್ರಿಲ್ ತಿಂಗಳಲ್ಲಿ ನಡೆಯಬೇಕಿದ್ದ ಪರೀಕ್ಷೆಯನ್ನೂ ಕೊರೊನಾದಿಂದಾಗಿ ಮುಂದೂಡಲಾಗಿತ್ತು. ನಂತರದ ದಿನಗಳಲ್ಲಿ ಪರೀಕ್ಷೆಯ ದಿನಾಂಕ ಪ್ರಕಟಿಸುವುದಾಗಿ ತಿಳಿಸಲಾಗಿದೆ.

## ವೈದ್ಯಕೀಯ ಸಿಬ್ಬಂದಿ, ಕುಟುಂಬದವರಿಗೆ ಶೇ.10 ಬೆಡ್

ಬೆಂಗಳೂರು, ಮೇ 4- ಕೊರೊನಾ ಅಲೆಗೆ ಸಿಲುಕಿ ಸೋಂಕಿತರಾಗುವ ವೈದ್ಯಕೀಯ ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗೆ ಶೇ.10ರಷ್ಟು ಬೆಡ್‌ಗಳನ್ನು ಮೀಸಲಿಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕೊರೊನಾ ವಾರಿಯರ್ಸ್‌ಗಳು ಕೂಡ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುತ್ತಿದ್ದು, ಆಯಾ ಜಿಲ್ಲೆಗಳಲ್ಲಿನ ನಿಗದಿತ ಕೋವಿಡ್ ಆಸ್ಪತ್ರೆಗಳಲ್ಲಿ ಶೇ. 10 ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು. ಜಿಲ್ಲೆಗಳ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ಇತರೆ ವೈದ್ಯೇತರ ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಈ ಹಾಸಿಗೆಗಳನ್ನು ಒದಗಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕ ಓಂ ಪ್ರಕಾಶ್ ಪಾಟೀಲ್ ಆದೇಶಿಸಿದ್ದಾರೆ.

## ಪತ್ರಕರ್ತರು ಮುಂಚೂಣಿ ಕಾರ್ಯಕರ್ತರು : ಸಿಎಂ ಘೋಷಣೆ

ಬೆಂಗಳೂರು, ಮೇ 4 – ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪತ್ರಕರ್ತರನ್ನು ಕೋವಿಡ್ ಪರಿಸ್ಥಿತಿ ನಿರ್ವಹಣೆ ಮಾಡುವ ಮುಂಚೂಣಿ ಕಾರ್ಯಕರ್ತರು ಎಂದು ಪರಿಗಣಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರ ನೇತೃತ್ವದಲ್ಲಿ ಪತ್ರಕರ್ತರ ನಿಯೋಗವು ಇಂದು ತಮ್ಮನ್ನು ಭೇಟಿ ಮಾಡಿ ಸಲ್ಲಿಸಿದ ಮನವಿ ಪತ್ರವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ವಿಷಯ ತಿಳಿಸಿದರಲ್ಲದೇ, ಪತ್ರಕರ್ತರಿಗೆ ಆದ್ಯತೆಯ ಮೇಲೆ ಕೋವಿಡ್ ಲಸಿಕೆ ನೀಡುವುದಾಗಿ ಹೇಳಿದ್ದಾರೆ.

ಪಬ್ಲಿಕ್ ಟಿವಿ ರವೀಶ್, ಯುಎನ್ ಐನ ರಾಚಪ್ಪ, ಪ್ರಜಾ ಟಿವಿಯ ಅರುಣ್ ಕುಮಾರ್ ಮತ್ತಿತರರು ನಿಯೋಗದಲ್ಲಿದ್ದರು.

ತಮ್ಮ ಮನವಿಯನ್ನು ಪರಿಗಣಿಸಿ (3ನೇ ಪುಟಕ್ಕೆ)

### ಸಮಯಕ್ಕೆ ಸರಿಯಾಗಿ ಸಿಗದ ಬೆಡ್, ಚಿಕಿತ್ಸೆ

## ಉಸಿರಾಟದ ತೊಂದರೆಯಿದ್ದ ನಗರದ ಯುವತಿ ಕೊನೆಯುಸಿರು

ದಾವಣಗೆರೆ, ಮೇ 4- ಸಮಯಕ್ಕೆ ಸರಿಯಾಗಿ ಬೆಡ್ ಮತ್ತು ಚಿಕಿತ್ಸೆ ಸಿಗದ ಹಿನ್ನೆಲೆಯಲ್ಲಿ ಉಸಿರಾಟದ ತೊಂದರೆ ಇದ್ದ ಯುವತಿಯೋರ್ವಳು ಸಾವನ್ನಪ್ಪಿರುವ ಘಟನೆ ನಗರದಲ್ಲಿಂದು ನಡೆದಿದೆ.

ನಗರದ ಭರತ್ ಕಾಲೋನಿಯ ಸಂಗೀತಾ (17) ಮೃತ ಯುವತಿ.

ಯುವತಿ ಸಂಗೀತಾಗೆ ನಿನ್ನೆ ಸೋಮವಾರದಿಂದ ಕಫ ಹಾಗೂ ಉಸಿರಾಟದ ತೊಂದರೆ ಇದ್ದು, ದಾವಣಗೆರೆಯಲ್ಲಿರುವ ಸುಮಾರು 13 ಆಸ್ಪತ್ರೆಗಳನ್ನು ಸುತ್ತಿದರೂ ಚಿಕಿತ್ಸೆ ಸಿಕ್ಕಿಲ್ಲ ಹಾಗೂ ಬೆಡ್ ಗಳು ಕೂಡ ಸಿಕ್ಕಿಲ್ಲ. ಇದರಿಂದ ಕೊನೆಗೆ ಪೋಷಕರು ಯುವತಿಯನ್ನು ಇಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾಸ್ಪತ್ರೆಗೆ ಕರೆತಂದಿದ್ದು, ಸರಿಯಾದ ಸಮಯಕ್ಕೆ ಬೆಡ್ ಹಾಗೂ ಚಿಕಿತ್ಸೆ ಸಿಗದೇ ಸಾವನ್ನಪ್ಪಿದ್ದಾಳೆ. ಜಿಲ್ಲಾಸ್ಪತ್ರೆಯ ಮುಂಭಾಗ ಯುವತಿ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಸರ್ಕಾರ ಹಾಗೂ ಜಿಲ್ಲಾಡಳಿತ ವಿರುದ್ಧ (2ನೇ ಪುಟಕ್ಕೆ)

## ವೆಂಟಿಲೇಟರ್ ಸಿಗದೇ ಯುವಕ ಸಾವು

ದಾವಣಗೆರೆ, ಮೇ 4- ವೆಂಟಿಲೇಟರ್ ಸಿಗದೆ ಚಿಕಿತ್ಸೆ ಪಡೆಯುತ್ತಿದ್ದ ಯುವಕನೋರ್ವ ಮೃತಪಟ್ಟಿರುವ ಘಟನೆ ಇಂದು ನಡೆದಿದೆ.

ತಾಲ್ಲೂಕಿನ ಹನಗವಾಡಿ ಗ್ರಾಮದ ಶಿವಶಂಕರ್ (28) ಸಾವನ್ನಪ್ಪಿದ ಯುವಕ.

ಒಂದು ವಾರದ ಹಿಂದೆ ಯುವಕನಿಗೆ ಜ್ವರ ಕಾಣಿಸಿಕೊಂಡ ಕಾರಣ ಚಿಕಿತ್ಸೆಗಾಗಿ ಹರಿಹರದ ಆಸ್ಪತ್ರೆಯಲ್ಲಿ ದಾಖಲಾಗಿದ್ದ. ಆಗ ಈತನಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿತ್ತು. ಆಮ್ಲಜನಕದ ಚಿಕಿತ್ಸೆ ಪಡೆಯುತ್ತಿದ್ದ ಈತನು ಸೋಮವಾರ ಸಂಜೆಯಿಂದ ತೀವ್ರ ಉಸಿರಾಟದ ತೊಂದರೆ ಅನುಭವಿಸುತ್ತಿದ್ದ ಹಿನ್ನೆಲೆಯಲ್ಲಿ (3ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಆಕ್ಸಿಜನ್ ಬೆಡ್‌ಗಾಗಿ ವೆಯ್ಟಿಂಗ್ ಲಿಸ್ಟ್

ದಾವಣಗೆರೆ, ಮೇ 4 - ಕಳೆದ ಕೆಲ ದಿನಗಳಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿರುವ ಆಕ್ಸಿಜನ್ ಹಾಗೂ ಐ.ಸಿ.ಯು.ಗಳು ತುಂಬಿಕೊಂಡಿವೆ. ಹೊಸ ರೋಗಿಗಳು ಆಕ್ಸಿಜನ್ ಬೆಡ್‌ಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ.

ಕೊರೊನಾ ಎರಡನೇ ಅಲೆಯಲ್ಲಿ ಆಕ್ಸಿಜನ್ ಬೆಡ್‌ಗಳ ಬೇಡಿಕೆ ಹೆಚ್ಚಾಗಿಯೇ ಕಂಡು ಬರುತ್ತಿದೆ. ಜಿಲ್ಲೆಯಲ್ಲಿ ರೋಗಿಗಳು ಸಂಖ್ಯೆ ಹೆಚ್ಚಾಗುತ್ತಿರುವ ಜೊತೆಗೆ, ಹೊರ ಜಿಲ್ಲೆಗಳಿಂದ ಬರುವವರೂ ಸೇರಿ ಆಸ್ಪತ್ರೆಗಳ ವ್ಯವಸ್ಥೆ ಮೇಲಿನ ಹೊರೆ ಹೆಚ್ಚಾಗುತ್ತಿದೆ.

ಆಕ್ಸಿಜನ್ ಬೆಡ್‌ಗಳ ಸಂಖ್ಯೆ ಹೆಚ್ಚಿಸುವ ಸಾಮರ್ಥ್ಯ ಇದ್ದರೂ ಸಹ, ಅಗತ್ಯ ಪ್ರಮಾಣದ ಆಕ್ಸಿಜನ್ ಪಡೆಯುವುದು ಸವಾಲಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಆಕ್ಸಿಜನ್ ಪೂರೈಕೆಗೆ ತೊಡಕಾಗಿ ಸಾವುಗಳು ಸಂಭವಿಸುತ್ತಿರುವ ವರದಿಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಆಕ್ಸಿಜನ್ ಬೆಡ್ ಹೆಚ್ಚಿಸುವುದು ಸುಲಭದ ಕೆಲಸವೇನಲ್ಲ.

ಜಿಲ್ಲಾಸ್ಪತ್ರೆಯಾದ ನಗರದ ಸಿ.ಜಿ. ಆಸ್ಪತ್ರೆಯಲ್ಲಿ 300ರಷ್ಟು ಬೆಡ್‌ಗಳಿದ್ದು, ಅವುಗಳೆಲ್ಲವೂ ತುಂಬಿವೆ. ಇನ್ನೂ ಬೆಡ್‌ಗಳನ್ನು ಹೆಚ್ಚಿಸುವ ಬಗ್ಗೆ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳುತ್ತಿದೆ. ಆದರೆ,

**ಕೊರೊನಾ ರೋಗಿಗಳಿಂದ ತುಂಬಿದ ಆಸ್ಪತ್ರೆಗಳು**

ಇದೆಲ್ಲವೂ ಆಕ್ಸಿಜನ್ ಲಭ್ಯತೆಯನ್ನು ಆಧರಿಸಿದೆ.

ಉಳಿದಂತೆ ನಗರದ ಖಾಸಗಿ ಆಸ್ಪತ್ರೆಗಳಲ್ಲೂ ಬೆಡ್‌ಗಳ ಲಭ್ಯತೆ ಕಷ್ಟಸಾಧ್ಯವಾಗಿದೆ. ಯಾವ ಆಸ್ಪತ್ರೆಗೆ ಕರೆ ಮಾಡಿದರೂ ಬೆಡ್‌ಗಳು ಸುಲಭವಾಗಿ ಸಿಗುತ್ತಿಲ್ಲ. ಬೆಡ್‌ಗಳು ಇಲ್ಲ ಎಂಬ ಉತ್ತರ ಸಿಗುತ್ತಿದೆ ಎಂದು ರೋಗಿಗಳ ಕಡೆಯವರು ತಿಳಿಸುತ್ತಿದ್ದಾರೆ.

ದಾವಣಗೆರೆ ಜಿಲ್ಲೆಯಷ್ಟೇ ಅಲ್ಲದೇ ಪಕ್ಕದ ಚಿತ್ರದುರ್ಗ, ಹಾವೇರಿ, ಬಳ್ಳಾರಿ ಜೊತೆಗೆ ಬೆಂಗಳೂರಿನಿಂದಲೂ ರೋಗಿಗಳು ಬರುತ್ತಿದ್ದಾರೆ. ಇದೇ ವೇಳೆ, ನಗರದಲ್ಲೂ ಸಕ್ರಿಯ ಸೋಂಕಿತರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಎರಡನೇ ಅಲೆಯಲ್ಲಿ ಯುವಕರಿಗೂ ಆಕ್ಸಿಜನ್ ಬೆಡ್ ಬೇಕಾಗುವ ಪ್ರಕರಣಗಳು ಏರುತ್ತಿವೆ.

ನಗರದಲ್ಲಿರುವ ಸಿ.ಜಿ. ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್, (3ನೇ ಪುಟಕ್ಕೆ)


**MANIS DATA LINK**

BSNL

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

**3300 GB**

**60 Mbps**

Super Speed Inter Net
24 Hrs. Unlimited free Calling on (Local + STD) to Any Network, FTTH Plan

**Starting Plan**

**Rs.599/-**

*Instalation Free*

**PH: 08192 295900**


## 2ನೇ ಡೋಸ್ ಬಾಕಿ ಇರುವ ಫಲಾನುಭವಿಗಳಿಗೆ ಲಸಿಕೆ

ದಾವಣಗೆರೆ, ಮೇ 4 - ಜಿಲ್ಲೆಯ 45 ವರ್ಷ ಮೇಲ್ಪಟ್ಟ ಹಾಗೂ ಮೊದಲ ಡೋಸ್ ಪಡೆದು, ಎಂಟು ವಾರ ಸಂಪೂರ್ಣವಾದ ಫಲಾನುಭವಿಗಳಿಗೆ ಆದ್ಯತೆ ಮೇಲೆ 2 ನೇ ಡೋಸ್ ಕೋವಿಶೀಲ್ಡ್ ಲಸಿಕೆಯನ್ನು ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಮೇ 5 ರಿಂದ ನೀಡಲಾಗುವುದು ಎಂದು ಡಿ ಹೆಚ್ ಓ ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 277 ಸೋಂಕು ಪತ್ತೆ

ದಾವಣಗೆರೆ, ಮೇ 4 – ಜಿಲ್ಲೆಯಲ್ಲಿ ಮಂಗಳವಾರ 277 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 102 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ ಪ್ರಸಕ್ತ 2,200 ಸಕ್ರಿಯ ಸೋಂಕಿತರಿದ್ದಾರೆ. ಮಂಗಳವಾರದಂದು ದಾವಣಗೆರೆ ತಾಲ್ಲೂಕಿನಲ್ಲಿ 133, ಹರಿಹರದಲ್ಲಿ 28, ಜಗಳೂರಿನಲ್ಲಿ 21, ಚನ್ನಗಿರಿಯಲ್ಲಿ 30, ಹೊನ್ನಾಳಿಯಲ್ಲಿ 53 ಹಾಗೂ ಹೊರ ಜಿಲ್ಲೆಗಳ 12 ಸೋಂಕಿತರು ಕಂಡು ಬಂದಿದ್ದಾರೆ.

## ರಾಜ್ಯದಲ್ಲಿ 44,631 ಸೋಂಕಿತರು ಪತ್ತೆ

ಬೆಂಗಳೂರು, ಮೇ 4 – ರಾಜ್ಯದಲ್ಲಿ ಮಂಗಳವಾರ 44,631 ಕೊರೊನಾ ಸೋಂಕಿತರು ಪತ್ತೆಯಾಗಿದ್ದು, 292 ಜನ ಸಾವನ್ನಪ್ಪಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 4.64 ಲಕ್ಷಕ್ಕೆ ತಲುಪಿದೆ. ಮಂಗಳವಾರದಂದು 24,714 ಜನ ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ 20,870 ಸೋಂಕಿತರು ಕಂಡು ಬಂದಿದ್ದು, 132 ಜನ ಸಾವಿಗೀಡಾಗಿದ್ದಾರೆ. ಬೆಂಗಳೂರು ನಗರದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 3.01 ಲಕ್ಷಕ್ಕೆ ತಲುಪಿದೆ.

ಮೈಸೂರಿನಲ್ಲಿ 2,293, ಹಾಸನದಲ್ಲಿ 2,278, ತುಮಕೂರಿನಲ್ಲಿ 1,636, ಮಂಡ್ಯದಲ್ಲಿ 1,506, ಕಲಬುರಗಿಯಲ್ಲಿ 1,280 ಸೋಂಕಿತರು ಪತ್ತೆಯಾಗಿದ್ದಾರೆ.

### ಬೂಸ್ನೂರು ಉಮಾಮಹೇಶ್ವರಪ್ಪ (ಸ್ವಾಮಿ) ನಿಧನ



ದಾವಣಗೆರೆ ಹಳೆಪೇಟೆ ವಾಸಿ

**ಬೂಸ್ನೂರು ಉಮಾಮಹೇಶ್ವರಪ್ಪ (ಸ್ವಾಮಿ)**

ಅವರು 4.05.2021ರ ಮಂಗಳವಾರ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 5.05.2021ರ ಬುಧವಾರ ಬೆಳಗ್ಗೆ 11 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಪುತ್ರರಾದ: ಡಾ. ಯೋಗೇಂದ್ರಕುಮಾರ್ ಬಿ.ಯು ಧೀರೇಂದ್ರಕುಮಾರ್ ಬಿ.ಯು., ವೀರೇಂದ್ರ ಕುಮಾರ್ ಬಿ.ಯು.

ಪುತ್ರಿ: ಶ್ರೀಮತಿ ಗಂಗಾಂಬಿಕಾ ಮತ್ತು ರಾಜು, ಬೆಂಗಳೂರು

98445 73524, 98444 40988, 86603 06140

### ಬಾಡದ ಕೆ.ಎಂ. ಚಂದ್ರಶೇಖರಯ್ಯ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 5ನೇ ಕ್ರಾಸ್ ವಾಸಿ ದಾವಣಗೆರೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಶಿವರಾಜ್ ಪಾಟೀಲ್ ಅವರ ತಂದೆ, ಸಿ.ಜಿ. ಆಸ್ಪತ್ರೆ ನಿವೃತ್ತ ಸೂಪರಿಂಟೆಂಡೆಂಟ್ **ಬಾಡದ ಕೆ.ಎಂ. ಚಂದ್ರಶೇಖರಯ್ಯ** ಅವರು ದಿನಾಂಕ 4.5.2021ರ ಮಂಗಳವಾರ ರಾತ್ರಿ 9 ಗಂಟೆಗೆ ನಿಧನರಾದರು. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.5.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 98444 22424

# ತಮ್ಮದಲ್ಲದ ತಪ್ಪಿನಿಂದಾಗಿ ನಮ್ಮ ಜನ ಬಲಿ...!

**ಈ ಬಾರಿ ಭಾರಿಸಲು ತಟ್ಟೆ, ಜಾಗಟೆಗಳು ಸದ್ದು ಮಾಡುತ್ತಿಲ್ಲ, ಮುಂಬತ್ತಿಗಳು ಉರಿಯುತ್ತಿಲ್ಲ, ಚಪ್ಪಾಳೆ ಕೇಳುತ್ತಿಲ್ಲ, ಅದರ ಬದಲು ಪ್ರಾಣ ವಾಯುವಿನ ಕೊರತೆಯಿಂದಾಗಿ ಸತ್ತ ಸಾವಿರಾರು ಜೀವಗಳ ದೇಹಗಳ ಚಿತೆಗಳು ಮೌನವಾಗಿ ಉರಿಯುತ್ತಿವೆ.**



ಕಳೆದ ವರ್ಷ ವಿದೇಶದಿಂದ ಬಂದವರಿಂದ, ಅವರಿಂದ-ಇವರಿಂದ ಕೊರೊನಾ ಬಂತು...,ಇಲ್ಲದೆ ಹೋಗಿದ್ದರೆ ಭಾರತಕ್ಕೆ ಕೊರೊನಾ ಬರುತ್ತಿರಲಿಲ್ಲ ಎಂದೆಲ್ಲಾ ಹೇಳಿದೆವು. ಉದ್ದೇಶ ಪೂರ್ವಕವಾಗಿ ಪ್ರಭುತ್ವದ ನಿರ್ಲಕ್ಷ್ಯವನ್ನು ಮರೆಮಾಚಿದೆವು. ನಮಸ್ತೆ ಟ್ರಂಪ್ ಕಾರ್ಯಕ್ರಮ ನಡೆಸಿದೆವು. ನಾವು ಆ ಬಗ್ಗೆ ಮಾತನಾಡಲಿಲ್ಲ. ಮಹಾರಾಷ್ಟ್ರದಲ್ಲಿ, ಗುಜರಾತಿನಲ್ಲಿ ಸರ್ಕಾರ ರಚಿಸಲು ನಮ್ಮ ಪ್ರಭುತ್ವ ತಲೆಕೆಡಿಸಿಕೊಂಡಿತ್ತು. ನಾವು ಮಾತನಾಡಲಿಲ್ಲ. ಈ ಅಧಿಕಾರದ ಆಟ ಮುಗಿದ ಬಳಿಕ ರಾತ್ರೋರಾತ್ರಿ ಲಾಕ್ ಡೌನ್ ಮಾಡಿದೆವು. ಈ ಬಾರಿ ಬಾರಿಸಲು ತಟ್ಟೆ, ಜಾಗಟೆಗಳು ಸದ್ದು ಮಾಡುತ್ತಿಲ್ಲ. ಮುಂಬತ್ತಿಗಳು ಉರಿಯುತ್ತಿಲ್ಲ, ಚಪ್ಪಾಳೆ ಕೇಳುತ್ತಿಲ್ಲ. ಅದರ ಬದಲು ಪ್ರಾಣ ವಾಯುವಿನ ಕೊರತೆಯಿಂದಾಗಿ ಸತ್ತ ಸಾವಿರಾರು ಜೀವಗಳ ದೇಹಗಳ ಚಿತೆಗಳು ಮೌನವಾಗಿ ಉರಿಯುತ್ತಿವೆ.

ಪಶ್ಚಿಮ ಬಂಗಾಳ ಸೇರಿದಂತೆ ಐದು ರಾಜ್ಯಗಳಲ್ಲಿ ಚುನಾವಣೆ ನಡೆದಿದೆ, ನಡೆಯುತ್ತಿದೆ. ಲಕ್ಷ ಲಕ್ಷ ಸಂಖ್ಯೆಯಲ್ಲಿ ಜನ ಸೇರುತಿದ್ದಾರೆ. ಚುನಾವಣಾ ಆಯೋಗ ಇದೆಲ್ಲಕ್ಕೂ ಕಣ್ಣುಮುಚ್ಚಿಕೊಂಡು ಅನುಮತಿ ನೀಡಿದೆ. ಕುಂಭ ಮೇಳ ನಡೆಯುತ್ತಿದೆ. ಹತ್ತಾರು ಲಕ್ಷ ಜನ ಸೇರುತ್ತಾರೆ. ಹೀಗೆ ದೇಶದ ಪ್ರತಿಷ್ಠಿತ ದೇವರುಗಳ ಜಾತ್ರೆ, ತೇರುಗಳು, ಉತ್ಸವಗಳು ಮದುವೆ ಮುಂತಾದ ಮಂಗಳ ಕಾರ್ಯಗಳು ಎಗ್ಗಿಲ್ಲದೆ ನಡೆಯುತ್ತವೆ. ಸಂಕಷ್ಟದ ಸ್ಥಿತಿಯಲ್ಲೂ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅವಕಾಶ ಮಾಡಿಕೊಟ್ಟು, ತಮ್ಮ ಬೇಳೆ ಬೆಂದ ಮೇಲೆ ಕೊರೊನಾ ಎರಡನೇ ಅಲೆ ಬರಲು ಜನರೇ ಕಾರಣ ಎನ್ನುತ್ತಿದೆ ಪ್ರಭುತ್ವ, ದೇಶದ ಜನ ಮಾತನಾಡುತಿದ್ದಾರೆ ಸರ್ಕಾರ ನಡೆಸಿದ ಚುನಾವಣೆಗಳೇ ಕೊರೊನಾ ಎರಡನೇ ಅಲೆ ಹೆಚ್ಚಾಗಲು ಕಾರಣ ಎಂದು. ಚೆನ್ನೈ ಮತ್ತು ಕೊಲ್ಕೊತ್ತಾ ಹೈಕೋರ್ಟುಗಳು ಚುನಾವಣಾ ಆಯೋಗವನ್ನು ತರಾಟೆಗೆ ತೆಗೆದು ಕೊಂಡು, ಆಯೋಗ ಯಾರ ಆಣತಿಯಂತೆ ಕೆಲಸ ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿವೆ, ನೇರವಾಗಿ ಚುನಾವಣಾ ಆಯೋಗವೇ ಹೊಣೆ ಎಂದು ಹೇಳಿವೆ. ಸರ್ಕಾರ ಮಾತ್ರ ಇದನ್ನು ಜನರ ತಲೆಗೆ ಕಟ್ಟಲು ಮುಂದಾಗಿದೆ.

ಜನವರಿ 16, 2021 ರಂದು ಪ್ರಧಾನಿಯವರು ದೇಶವನ್ನುದ್ದೇಶಿಸಿ ಮಾತನಾಡುತ್ತಾ 'ದೇಶ ಕೊರೊನಾ ದಿಂದ ಮುಕ್ತವಾಗಿದೆ. ನಾವು ಕೊರಾನಾವನ್ನು ನಮ್ಮ ಆತ್ಮ ಬಲದಿಂದ ಗೆದ್ದಿದ್ದೇವೆ' ಎಂದರು. 2021 ಏಪ್ರಿಲ್ 8 ರಂದು ಪ್ರಧಾನಿ ಮಾತನಾಡಿ, ನಾವು ಕೊರೊನಾ ವಿರುದ್ಧ ಹೋರಾಡುವ ಲಸಿಕೆಯನ್ನು ಸಾಕಷ್ಟು ತಯಾರಿಸಿದ್ದೇವೆ, ನಮಗೆ ಒಂದು ವರ್ಷದ ಅನುಭವಿದೆ, ನಾವು ಈಗ ಕೊರೊನಾಕ್ಕೆ ಹೆದರ ಬೇಕಿಲ್ಲ ಎಂದು ಜನರನ್ನು ನಂಬಿಸಿದ್ದರು. ಆದರೆ ಈಗ ಪರಿಸ್ಥಿತಿ ಏನಾಗಿದೆ? ಆಸ್ಪತ್ರೆಗಲ್ಲಿ ಬೆಡ್‌ಗಳಿಲ್ಲ, ಲಸಿಕೆಯ ಕೊರತೆಯಾಗಿರುವುದು ದೇಶದ ಜನಕ್ಕೆಲ್ಲ ಗೊತ್ತಾಗಿದೆ, ಆಂಬ್ಯುಲೆನ್ಸ್‌ಗಳಿಲ್ಲ, ಆಮ್ಲಜನಕದ ಕೊರತೆ ಎಷ್ಟಾಗಿದೆ ಎಂದು ಮಾಧ್ಯಮಗಳಲ್ಲಿ ಹೆಣದ ರಾಶಿಗಳನ್ನು ನೋಡಿದಾಗ ನಮಗೆ ಗೊತ್ತಾಗಿದೆ. ಆಮ್ಲಜನಕದ ಕೊರತೆಯಿಂದಾಗಿ ತಮ್ಮವರೆದುರಿಗೆ ವಿಲಿವಿಲಿ ಒದ್ದಾಡಿ ಪ್ರಾಣಬಿಟ್ಟಿದ್ದನ್ನ ಜನ ತುಂಬಿದ ಕಂಬನಿಗಳಿಂದಲೇ ನೋಡಿ ಕೊರಗಿದ್ದಾರೆ. ಕೊನೆಗೆ ಸತ್ತ ಮೇಲೆ ಸ್ಮಶಾನದಲ್ಲಿ ಹೆಣ ಹೂಳಲು ಸ್ಥಳವಿಲ್ಲ. ಎಷ್ಟೋ ಕಡೆ ಸ್ಮಶಾನಗಳೇ ಇಲ್ಲ. ಜನ ಬದುಕಿದ್ದಾಗಲೂ ನೆಮ್ಮದಿಯ ಬದುಕು ನೀಡಲು ಸೋತು ಹೋಗಿರುವ ಪ್ರಭುತ್ವ, ಸತ್ತ ಮೇಲಾದರೂ ಗೌರವದಿಂದ ಅಂತ್ಯಸಂಸ್ಕಾರ ಮಾಡಲು ಅವಕಾಶ ಕಲ್ಪಿಸಿಕೊಡುತ್ತಿಲ್ಲ.

ಒಂದು ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳುತ್ತೇನೆ, 2020 ರ ಏಪ್ರಿಲ್‌ನಿಂದ 2021 ರ ಜನವರಿಯತನಕ ಭಾರತ ವಿದೇಶಗಳಿಗೆ 9 ಸಾವಿರ ಮೆಟ್ರಿಕ್ ಟನ್ ಆಮ್ಲಜನಕವನ್ನು ರಫ್ತು ಮಾಡಿದೆ. ಅದಕ್ಕಿಂತ ಮೊದಲು ಅವರೇ ಹೇಳುವ ಹಾಗೆ ವರ್ಷಕ್ಕೆ 400 ರಿಂದ 500 ಮೆಟ್ರಿಕ್ ಟನ್ ಆಮ್ಲಜನಕವನ್ನು ರಫ್ತು ಮಾಡಲಾಗಿದೆ ಯಂತೆ. ಲಸಿಕೆ ತಯಾರಾದ ಪ್ರಾರಂಭದಲ್ಲಿ ವಿದೇಶಗಳಿಗೆ ಲಸಿಕೆಯನ್ನು ರಫ್ತು ಮಾಡಲಾಯಿತು. ಇದನ್ನೂ ಸರ್ಕಾರವೇ ಹೇಳಿ ಕೊಂಡಿತು. ಈಗ ನಮಗೆ ಲಸಿಕೆಯೂ ಇಲ್ಲ, ಆಮ್ಲಜನಕವೂ ಇಲ್ಲ. 2020 ರ ಅಕ್ಟೋಬರ್‌ನಲ್ಲಿ 286 ಕೋಟಿ ಹಣವನ್ನು ಬಿಡುಗಡೆ ಮಾಡಿ ಆರೋಗ್ಯ ಇಲಾಖೆಯ 162 ಆಸ್ಪತ್ರೆಗಳಲ್ಲಿ ಆಮ್ಲಜನಕವನ್ನು ತಯಾರು ಮಾಡಿ ನೇರವಾಗಿ ರೋಗಿಗಳ ಮಂಚಕ್ಕೆ ಆಮ್ಲಜನಕ ಸರಬರಾಜು ಮಾಡಬೇಕೆಂದು ಹೇಳಿತು. ಇಲ್ಲಿಯ ತನಕ ಈ ಕೆಲಸ ಪ್ರಾರಂಭವಾಗಿರುವುದು ಕೇವಲ 32 ಘಟಕಗಳಲ್ಲಿ ಮಾತ್ರ. ಇಂದು ಅವುಗಳೆಲ್ಲವೂ ಕೆಲಸ ಪ್ರಾರಂಭಿಸಿದ್ದರೆ, ಕೇವಲ 286 ಕೋಟಿಗಳಲ್ಲಿ ದೇಶದ ಜನರಿಗೆಲ್ಲ ಆಮ್ಲಜನಕ ದೊರೆಯುತಿತ್ತು, ಯಾರೂ ಆಮ್ಲಜನಕದ ಕೊರತೆಯಿಂದ ಪ್ರಾಣ ಕಳೆದುಕೊಳ್ಳುತ್ತಿರಲಿಲ್ಲ. ಟಾಟಾ ಕಂಪನಿಯವರು ಮಾನವೀಯತೆ ಮೆರೆದು ತಮ್ಮ ಕಂಪನಿಗಳಿಂದ ಆಮ್ಲಜನಕ ಸರಬರಾಜು ಮಾಡಿದರು. ಆದರೆ ಇದು ಅದಾನಿ, ಅಂಬಾನಿಗಳಿಗೆ ಸಾಧ್ಯವಾಗಲಿಲ್ಲ.

ವಿಶ್ವ ಆರೋಗ್ಯ ಸಂಸ್ಥೆ 2020 ರ ಅಕ್ಟೋಬರ್‌ನಲ್ಲಿಯೇ ಎಚ್ಚರಿಕೆ ನೀಡಿ ಕೋವಿಡ್‌ನ ಎರಡನೆ ಅಲೆಯ ಬಗ್ಗೆ ಮಾಹಿತಿ ನೀಡಿದೆ. ಅದರ ಭೀಕರತೆಯನ್ನೂ ತಿಳಿಸಿದೆ. ನಮ್ಮ ಸರ್ಕಾರ ಅವುಗಳ ಬಗ್ಗೆ ನಿರ್ಲಕ್ಷ್ಯ ತೋರಿರುವುದರ ಪರಿಣಾಮ ಇಂದು ದೇಶದಲ್ಲಿ ಜನ ಬೀದಿಯ ಹೆಣಗಳಾಗ ಬೇಕಾಯಿತು. ಲಸಿಕೆ ತಯಾರಿಸುವ ವಿಷಯವನ್ನು ನೋಡಿದರೆ, ಜನರ ಸಾವಿನಲ್ಲೂ ಖಾಸಗಿಯವರಿಗೆ ಲಾಭ ಮಾಡಿಕೊಡುವ ರಾಜಕೀಯವೇ ನಡೆಯುತ್ತಿದೆ. ಭಾರತದಲ್ಲಿ ಲಸಿಕೆ ತಯಾರು ಮಾಡಲು ಸಾಮರ್ಥ್ಯವಿರುವ, ಅನುಭವವಿರುವ, ಸರ್ಕಾರಿ ಸ್ವಾಮ್ಯದ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ ಸೆಂಟರ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ, ಸೇರಿದಂತೆ ಅನೇಕ ಪಬ್ಲಿಕ್ ಸೆಕ್ಟರ್ ಕಂಪನಿಗಳಿದ್ದಾಗಲೂ, ಎರಡು ಖಾಸಗಿ ಕಂಪನಿಗೆ ಲಸಿಕೆ ತಯಾರು ಮಾಡಲು ಅವಕಾಶ ಮಾಡಿಕೊಡಲಾಗಿದೆ. ಭಾರತ್ ಭಯೋಟೆಕ್ ಕಂಪನಿಗೆ ಕೋವ್ಯಾಕ್ಸಿನ್ ತಯಾರು ಮಾಡಲು, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕಂಪನಿಗೆ ಕೋವಿಶಿಲ್ಡ್ ತಯಾರಿಸಲು ಅವಕಾಶ ಮಾಡಿಕೊಟ್ಟಿದೆ. ಸೀರಂ ಇನ್‌ಸ್ಟಿಟ್ಯೂಟ್‌ನ ಮಾಲೀಕ ಅದರ್ ಪೂನಂ ವಾಲಾ ದೇಶದ ಮೂರನೇ ದೊಡ್ಡ ಶ್ರೀಮಂತ.

ಈಗ ಈ ಕಂಪನಿಗಳು ಸರ್ಕಾರದ ಬೇಡಿಕೆಯಷ್ಟು ವ್ಯಾಕ್ಸಿನ್ ತಯಾರಿಸಲು ಆಗುತ್ತಿಲ್ಲ. ಬೇಡಿಕೆಯ ಅಗತ್ಯಕ್ಕೆ ತಕ್ಕಂತೆ ಉತ್ಪಾದಿಸಲು ಘಟಕಗಳನ್ನು ವಿಸ್ತರಿಸಿಕೊಳ್ಳಬೇಕು. ಅದಕ್ಕೆ ನಮ್ಮಲ್ಲಿ ಹಣವಿಲ್ಲ ಎಂದವು. ಆಗ ಕೇಂದ್ರ ಸರ್ಕಾರ 4500 ಕೋಟಿ ರೂ.ಗಳನ್ನು ನೀಡಿತು, ಭಾರತ್ ಭಯೋಟೆಕ್‌ಗೆ 1500 ಕೋಟಿ, ಸೀರಂಗೆ 3000 ಕೋಟಿ ರೂಗಳನ್ನು ನೀಡಿತು. ಈಗ ಅವುಗಳ ಉತ್ಪಾದನಾ ಸಾಮರ್ಥ್ಯ ಎಷ್ಟಿದೆ ಎಂದರೆ ಸೀರಂ ಕಂಪನಿ 7 ರಿಂದ 10 ಕೋಟಿ ವ್ಯಾಕ್ಸಿನ್ ತಯಾರಿಸಿದರೆ, ಭಾರತ್ ಭಯೋಟೆಕ್ 90 ಲಕ್ಷ ವ್ಯಾಕ್ಸಿನ್‌ಗಳನ್ನು ತಯಾರಿಸುತ್ತಿವೆ. ಹಾಲಿ ಇರುವ ಬೇಡಿಕೆ 30 ಕೋಟಿ, ಭಾರತ್ ಭಯೋಟೆಕ್ ಕಂಪನಿ ಅಮೇರಿಕಾದ ಮಲಂದಾಗಿಲ್ ಸಂಸ್ಥೆಯಿಂದ, ಸೀರಂ ಕಂಪನಿ ಇಂಗ್ಲೆಂಡಿನ ಅಸ್ಟ್ರಾಜನೆಕಾ ಕಂಪನಿಯಿಂದ ಲಸಿಕೆ ತಯಾರಿಸುವ ವೈರಾಣುವನ್ನು ಪಡೆದುಕೊಳ್ಳುತ್ತಿವೆ. ಇದನ್ನು ಭಾರತವೇ ತಯಾರಿಸುತ್ತದೆಂದು ಸರ್ಕಾರ ಬೊಗಳೆ ಬಿಡುತ್ತಿದೆ. ಇದು ಕೂಡಾ ಯುರೋಪ್‌ನಲ್ಲಿ ಮೂರನೇ ಲ್ಯಾಬೋರೇಟರಿ ಪರೀಕ್ಷೆ ನಡೆಯುವುದಕ್ಕಿಂತ ಮೊದಲೆ ವ್ಯಾಕ್ಸಿನ್ ತಯಾರಿಸಿದ್ದನ್ನು ನಮಗೆ ನೀಡಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಶೇ.60 ರಷ್ಟು ಜನರಿಗೆ ವ್ಯಾಕ್ಸಿನ್ ನೀಡಿದಾಗ ಹಾರ್ಡ್ ಇಮ್ಯೂನಿಟಿ ಬರುತ್ತದೆ. ಆಗ ಈ ಸೋಂಕನ್ನು ನಿಯಂತ್ರಿಸಬಹುದೆಂದು. ಇದರ ಪ್ರಕಾರ ನಾವು ನಮ್ಮ ದೇಶದ 85 ಕೋಟಿ ಜನರಿಗೆ ವ್ಯಾಕ್ಸಿನ್ ಹಾಕಬೇಕು. ಇಷ್ಟು ಜನರಿಗೆ ಹಾಕಲು ನಮಗೆ ಬೇಕಾಗುವ ವ್ಯಾಕ್ಸಿನ್ ಪ್ರಮಾಣ 175 ಕೋಟಿ (ಶೇ 6 ರಷ್ಟು ನಷ್ಟವನ್ನು ಸೇರಿ). ಈ ಪ್ರಮಾಣದ ವ್ಯಾಕ್ಸಿನ್ ತಯಾರಿಸಲು ಈ ಎರಡು ಕಂಪನಿಗಳಿಗೆ ಕನಿಷ್ಠ 14 ತಿಂಗಳುಗಳ ಕಾಲ ಬೇಕು. ಸರ್ಕಾರದಿಂದ 4500 ಕೋಟಿ ಸಹಾಯ ಧನ ಪಡೆದಿರುವ ಈ ಕಂಪನಿಗಳು, ವ್ಯಾಕ್ಸಿನ್‌ನನ್ನು ಕೇಂದ್ರ ಸರ್ಕಾರಕ್ಕೆ 156 ರಿಂದ 200 ರೂ. ಗೆ, ರಾಜ್ಯ ಸರ್ಕಾರಗಳಿಗೆ 400 ರೂ.ಗೆ, ಖಾಸಗಿಯವರಿಗೆ 600 ರೂ.ಗೆ ಮಾರುತ್ತಿದ್ದಾರೆ. ಪತ್ರಿಕಾ ಗೋಷ್ಠಿಯೊಂದರಲ್ಲಿ ಸೀರಂ ಕಂಪನಿಯ ಮಾಲೀಕ ಅದರ್ ಪೂನಾವಾಲಾರವರು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ 150 ರೂ.ಗೆ ಮಾರಿದರೆ ಲಾಭವಾಗುತ್ತದೆ ಎಂದಿದ್ದಾರೆ. ಹಾಗಾದರೆ ಹೆಚ್ಚಿನ ಲಾಭಕ್ಕೆ ಏಕೆ ಮಾರುತ್ತೀರಿ ಎಂದು ಮರು ಪ್ರಶ್ನೆ ಹಾಕಿದಾಗ ಆತನ ಉತ್ತರ ಹೀಗಿತ್ತು. ಜಗತ್ತಿನ ಬೇರೆ ದೇಶಗಳು 800 ರಿಂದ 1000 ರೂಗೆ ಮಾರುತಿದ್ದಾರೆ. ಅದು ಸೂಪರ್ ಪ್ರಾಫಿಟ್. ನಾವೂ ಕೂಡಾ ಸೂಪರ್ ಪ್ರಾಫಿಟ್ ಮಾಡಬೇಕು ಎಂದಿದ್ದಾರೆ. ಸಾವಿನಲ್ಲೂ ಸುಲಿಗೆ ಮಾಡುವ ಇಂಥವರಿಗೆ ನಮ್ಮ ಸರ್ಕಾರಗಳು ಜನ ಸಾಯುತ್ತಿರುವಾಗಲೂ ಸಹಾಯ ಧನ ನೀಡುತ್ತವೆ ಎಂದರೆ ಇವರಿಗೆ ದೇಶದ ಜನತೆಯ ಪ್ರಾಣ, ಬದುಕಿನ ಬಗ್ಗೆ ಎಷ್ಟು ಕಾಳಜಿ ಇರಬೇಕು?

ವಿದೇಶಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಲಸಿಕೆಗಳೆಂದರೆ (ವಿಜ್ಞಾನಿಗಳು ಶಿಫಾರಸ್ಸು ಮಾಡಿರುವುದು) ಮಾರ್ಡನ್, ಫೈಜರ್, ಜಾನ್ ಸನ್ ಅಂಡ್ ಜಾನ್ ಸನ್, ಸ್ಪುತ್ನಿಕ್ ಇವು ಯಾವುದನ್ನು ಈ ಕಂಪನಿಗಳು ಪಡೆದು ಕೊಂಡಿಲ್ಲ. ಪ್ರಾರಂಭದಲ್ಲಿ ಲಸಿಕೆ ತಯಾರಾದಾಗ ದೂರ ದೃಷ್ಟಿ ಇಲ್ಲದ ಸರ್ಕಾರ ಬೇರೆ ದೇಶಗಳಿಗೆ ಲಸಿಕೆಯನ್ನು ರಫ್ತು ಮಾಡಿತು. ಇದು ತನ್ನ ಭುಜವನ್ನು ತಾನು ತಟ್ಟಿಕೊಳ್ಳಲು, ಜನರನ್ನು ನಂಬಿಸಿ ಮೋಸ ಮಾಡುವ ಕೆಲಸವಾಗಿತ್ತು. ಈಗ ಅದರ ಕೊರತೆ ಎದುರಾದಾಗ ರಷ್ಯಾದಿಂದ 1.5 ಕೋಟಿ ಸ್ಪುತ್ನಿಕ್ ವೈರಸ್‌ನಿಂದ ತಯಾರಿಸಿದ ಲಸಿಕೆಯನ್ನು ಆಮದು ಮಾಡಿಕೊಂಡಿದೆ. ಭಾರತದಲ್ಲಿ ಸಾರ್ವಜನಿಕ ಕ್ಷೇತ್ರದ ಔಷಧಿ ತಯಾರಿಸುವ ಅನುಭವಿ ಕಂಪನಿಗಳಿದ್ದರೂ, ವಿಜ್ಞಾನಿಗಳು ಶಿಫಾರಸ್ಸು ಮಾಡಿದ ಲಸಿಕೆಗಳಿದ್ದವು, ಇವೆಲ್ಲವನ್ನೂ ಬಿಟ್ಟು ಖಾಸಗಿ ಕಂಪನಿಯವರ ಬೆನ್ನು ಬಿದ್ದಿದ್ದು ಏಕೆ? ಇದಕ್ಕೆ ಉತ್ತರ ಹೇಳಬೇಕಿಲ್ಲ. ಇಷ್ಟಕ್ಕೆ ತೃಪ್ತಿಯಾಗದ ಸರ್ಕಾರ ಲಸಿಕೆಯನ್ನು ಖಾಸಗಿಯವರಿಗೆ ಖರೀದಿಸಲು ಮುಕ್ತ ಅವಕಾಶ ಮಾಡಿ ಆದೇಶ ಹೊರಡಿಸಿದೆ. ಇನ್ನು ಮುಂದೆ ಖಾಸಗಿಯವರು ಅಗತ್ಯಕ್ಕಿಂತ ಹೆಚ್ಚಿನದನ್ನು ದಾಸ್ತಾನು ಮಾಡಿಕೊಂಡು ಕಾಳಸಂತೆಯಲ್ಲಿ ಕೈಗೆಟುಕದ ದರಕ್ಕೆ ಮಾರಾಟ ಮಾಡಲು ಸುಲಭವಾದ ಅವಕಾಶಕ್ಕೆ ಬಾಗಿಲು ತೆರೆದಿಟ್ಟಿದೆ.

ಕೇಂದ್ರ ಸರ್ಕಾರದ ಈ ಕ್ರಮವನ್ನು ಕರ್ನಾಟಕ, ಚನ್ನೈ, ಉತ್ತರಪ್ರದೇಶ, ದೆಹಲಿ ಹೈಕೋರ್ಟ್‌ಗಳು ತರಾಟೆಗೆ ತೆಗೆದುಕೊಂಡಿವೆ. ಸರ್ಕಾರ ವಿಶ್ವಸಂಸ್ಥೆ ಮುಂಚಿತವಾಗಿ ಎರಡನೇ ಅಲೆಯ ಮಾಹಿತಿಯನ್ನು ನೀಡಿದಾಗಲೂ, ಜನರ ಆರೋಗ್ಯವನ್ನು, ಬದುಕನ್ನು ಗಮನಿಸದೆ, ಚುನಾವಣೆಯಲ್ಲಿ ಮಗ್ನವಾಗಿತ್ತು ಎಂದಿದೆ. ಹೀಗಿದ್ದೂ ಇದು ಏನೂ ಅಲ್ಲವೆಂಬಂತೆ ಮುಖ ಒರೆಸಿಕೊಂಡಿವೆ ಸರ್ಕಾರಗಳು. ಚುನಾವಣೆಯಲ್ಲಿ ಮತ ನೀಡಲು ಜನ ಬೇಕಾದರೆ ಹೊರತು, ಮತ ನೀಡುವ ಜನ ಸಾಯುತ್ತಿರುವುದು ಕಣ್ಣಿಗೆ ಕಾಣಲಿಲ್ಲ. ಅವರ ಬದುಕು ಬೀದಿಗೆ ಬರುತ್ತಿರುವುದು ಕಾಣಲಿಲ್ಲ. ಜನರ ರಕ್ತಸಿಕ್ತ ಬದುಕಿನ ಮೇಲೆ, ಸತ್ತು ಕರಕಲಾದ ಅವರ ಸಮಾಧಿಯ ಮೇಲೆ ರಾಜ್ಯ ಆಳುವ ತವಕನಾ ಎಂದು ದೇಶದ ಜನ ಹಿಡಿ ಶಾಪ ಹಾಕುತಿದ್ದಾರೆ.

**- ಎಸ್.ಪಿ.ಮೂಲೆಮನೆ**
ಕುಕ್ಕುವಾಡ.
a.aradhyakkd@gmail.com


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 20 ಕಿ.ಮೀ. ದೂರದಲ್ಲಿ, ಕೂಲಂಬಿ ಹತ್ತಿರ ಕೆಂಗಲಹಳ್ಳಿಯಲ್ಲಿ 2 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
ಮೊ : 88848 93890

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್.ಎಂ. ಎನ್‌ಕ್ಲೇವ್‌ನಲ್ಲಿ ಗ್ಲಾಸ್ ಹೌಸ್ ಹತ್ತಿರ
30x50 East, 60x50 East, 40x75 East, 30x50, 30x50 East ಅಕ್ಕ-ಪಕ್ಕ, 30x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಕೋವಿಡ್ - 19 ಲಸಿಕೆ ಹಾಕಿಸಿಕೊಳ್ಳುವವರು**
ಆನ್ ಲೈನ್ ನೋಂದಣಿಗೆ ಸಂಪರ್ಕಿಸಿ :
ಮೊ. 98449-69738
ಸಮಯ : ಬೆಳಿಗ್ಗೆ 8 ರಿಂದ ಮಧ್ಯಾಹ್ನ 2

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಕಾಶೀಪುರ ಕ್ಯಾಂಪ್ ದಿ.ವಲ್ಲೂರಿ ಸತ್ಯನಾರಾಯಣ ಇವರ ಜ್ಞಾಪಕಾರ್ಥವಾಗಿ ವಲ್ಲೂರಿ ವೆಂಕಟರಾವ್ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಭದ್ರಾ ನ್ಯಾಚುರಲ್ಸ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್, ಮೆಡ್ ಪ್ಲಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್ ಆರ್ಯವೇದಿಕ್ ಔಷಧಿಗಳು, ಸಾವಯವ, ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ ದೊರೆಯುತ್ತವೆ.
ಮಳ್ಳೀಕಟ್ಟೆ, ಬಸವರಾಜ್ B.Sc (Agri)
94483 23796, 91646 76826

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ, ಹೊಸ ಬನಶಂಕರಿ ಲೇಔಟ್‌ನಲ್ಲಿ 30x48 East,30x50 West, 60x40 West 40 ಅಡಿ ರೋಡಿಗಿದೆ, 40x72 ಪೂರ್ವಕ್ಕೆ ರೋಡ್, ಪಶ್ಚಿಮಕ್ಕೆ ರೋಡ್, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಮನೆ ಲೀಸ್ ಗೆ ಇದೆ**
ಶಿವಾಜಿ ನಗರದ ದುರ್ಗಾಂಬಿಕಾ ದೇವಸ್ಥಾನದ ಹಿಂಭಾಗ ದಿಳ್ಳೆಪ್ಪನ ಗಲ್ಲಿಯಲ್ಲಿ 8 ಲಕ್ಷ ರೂ.ಗಳಿಗೆ ಹೊಸ ಮನೆ ಲೀಸ್ ಗೆ ಇದೆ.
ಸಂಪರ್ಕಿಸಿ : 98449-69738

**ಸೈಟುಗಳು ಮಾರಾಟಕ್ಕಿವೆ**
ಫೈನಲ್ ಅಪ್ರೂವಲ್ ಸೈಟ್‌ಗಳು ಯರಗುಂಟೆಯ ಶಿವಪುರದಲ್ಲಿ ಅತಿ ಕಡಿಮೆ ಬೆಲೆಗೆ ಮಾರಾಟಕ್ಕಿವೆ.
94838 62779

**ಗೋಲ್ಡನ್ ಲ್ಯಾಂಪ್ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು, ರೋಗಿಗಳನ್ನು ನೋಡಿಕೊಳ್ಳಲು ಹೋಂ ನರ್ಸ್ ಮತ್ತು ಆಯಾಗಳನ್ನು ಕಳುಹಿಸುತ್ತೇವೆ. ಮನೆ ಕೆಲಸ ಹಾಗೂ ಹರಿಹರದಲ್ಲಿ ಪೇಷಂಟ್ ಕೇರ್‌ಗೆ ತುರ್ತಾಗಿ ಯುವಕ, ಯುವತಿಯರು ಬೇಕಾಗಿದ್ದಾರೆ. ಊಟ, ವಸತಿ, ಆಕರ್ಷಕ ಸಂಬಳ ನೀಡಲಾಗುವುದು. ಸಂಪರ್ಕಿಸಿ
89047 35301, 98447 17618

**ಲಿಂಗಾಯತ (ಜಂಗಮ) ವಧು-ವರ**
ಲಿಂಗಾಯತ, ಜಂಗಮ ಇಂಜಿನಿಯರ್, ಡಾಕ್ಟರ್, ಲೆಕ್ಚರರ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ, ಉತ್ತಮ ವಧು-ವರರಿಗಾಗಿ ಸಂಪರ್ಕಿಸಿರಿ
ಮೊ: 98807 29108

**ಜಮೀನು ಕೊಳ್ಳಲು ಬೇಕಾಗಿರುತ್ತದೆ. ಹರಿಹರ, ಬಾತಿ, ಕೊಂಡಜ್ಜಿ**
74112 50447

**ಹುಡುಗರು ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮೊದಲ ಆದ್ಯತೆ.
ಸಂಪರ್ಕಿಸಿ : 63631 00191

**ಮನೆ ಬಾಡಿಗೆಗಿದೆ**
3BHK East Facing, ಗ್ರೌಂಡ್‌ಫ್ಲೋರ್, 10ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್
ಮೊ: 98444 06587
(ಸಸ್ಯಹಾರಿಗಳಿಗೆ ಮಾತ್ರ)

**ಲಿಂಗಾಯಿತ ಅಡುಗೆಯವರು ಬೇಕಾಗಿದ್ದಾರೆ**
ಮನೆಯಲ್ಲಿ ರುಚಿಕಟ್ಟಾಗಿ ಅಡುಗೆ ಮಾಡಲು ಲಿಂಗಾಯಿತ ಮಹಿಳೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಮೊ. : 94480 55555

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 8.30 ರಿಂದ ಸಂಜೆ 5.30 ಅಥವಾ ಸಂಜೆ 5.30 ರಿಂದ ಬೆಳಿಗ್ಗೆ 8.30 ಅಥವಾ 24 ಗಂಟೆಯೂ ಮನೆ ಕೆಲಸದೊಂದಿಗೆ ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ : 63639-54459

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಹೋಲ್ ಸೇಲ್ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಹುಡುಗ/ಹುಡುಗಿ PUC ಕಾಮರ್ಸ್ ಫೇಲ್/ಪಾಸ್ ಟ್ಯಾಲಿ ಆದವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಶ್ರೀ ರೇವಣಸಿದ್ದೇಶ್ವರ ಟ್ರೇಡರ್ಸ್
ಚಾಮರಾಜಪೇಟೆ, ದಾವಣಗೆರೆ - 1.
78920 18341

**ಸೈಟ್ ಬೇಕಾಗಿದೆ**
ಹೊಸ ಸರ್ ಎಂ.ವಿ. ಕಾಲೇಜ್ ಹತ್ತಿರ, ಉತ್ತರ ಅಥವಾ ಪೂರ್ವಕ್ಕೆ (30x40)
ಮೊ: 98444 06587

**16ನೇ ವರ್ಷದ ಪುಣ್ಯಸ್ಮರಣೆ**




ಜಿ.ಸಿ. ರುದ್ರಮುನಿ, ASI
ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ : ಶ್ರೀಮತಿ ಗೌರಮ್ಮ ಜಿ.ಎಂ.
ಮಗಳು : ಶ್ರೀಮತಿ ಆರ್. ಲತಾ ಮಂಜಣ್ಣ ಎಸ್.ಬಿ.,
ಮಗ : ಆರ್. ವೀರೇಂದ್ರ, ಶ್ರೀಮೈತ್ರಿ,
ಮೊಮ್ಮಕ್ಕಳು : ಓಂಪ್ರಕಾಶ್, ಶಿವಾನಿ ಹಾಗೂ ಬಂಧು-ಮಿತ್ರರು.

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆ ಬಲ್ಲ ಯುವಕರು ಬೇಕಾಗಿದ್ದಾರೆ. (ಸೂಪರ್‌ವೈಸರ್) ಊಟ, ವಸತಿ, ಆಕರ್ಷಕ ಸಂಬಳ ಕೊಡಲಾಗುವುದು.
94823 89317

**ಶ್ರೀ ಅಣಿಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
9980770791, 9606818273

**ಕೈಲಾಸ ಶಿವಗಣಾರಾಧನೆ**



# 433, ಕೊಂಡಜ್ಜಿ ರೋಡ್, ರಾಜೀವ್‌ಗಾಂಧಿ ಬಡಾವಣೆ, ದಾವಣಗೆರೆ ವಾಸಿ
ಶ್ರೀಮತಿ ಭಾಗೀರಥಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ : 28.04.2021ರ ಬುಧವಾರ ಸಂಜೆ 7.30ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಟಿ.ಹೆಚ್. ರೇವಣಸಿದ್ದಪ್ಪ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 6.5.2021ರ ಗುರುವಾರ ಬೆಳಿಗ್ಗೆ 9.00 ಗಂಟೆಗೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖ ತಪ್ತರು :
ಶ್ರೀಮತಿ ಭಾಗೀರಥಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗ, ದಾವಣಗೆರೆ.
ರತ್ನ ಎಲೆಕ್ಟ್ರಿಕಲ್ಸ್, ಹದಡಿ ರೋಡ್, ದಾವಣಗೆರೆ.
ಅರ್ಪಿತಾ ಸ್ಟಿಕ್ಕರ್ ಕಟ್ಟಿಂಗ್ಸ್, ದಾವಣಗೆರೆ. ಫೋ. : 98448 58614, 98444 04755

**ಹಳ್ಳಳ್ಳಿ ನಾಗರತ್ನಮ್ಮ ನಿಧನ**



ದಾವಣಗೆರೆ ಪಿ.ಜೆ. ಬಡಾವಣೆ 3ನೇ ಮುಖ್ಯರಸ್ತೆ ವಾಸಿ, ದಿ|| ಹಳ್ಳಳ್ಳಿ ವೀರಪ್ಪ ಇವರ ಪತ್ನಿ ಶ್ರೀಮತಿ ಹಳ್ಳಳ್ಳಿ ನಾಗರತ್ನಮ್ಮ ಅವರು ದಿನಾಂಕ 04.05.2021ರ ಮಂಗಳವಾರ ಸಂಜೆ 6 ಗಂಟೆಗೆ ನಿಧನರಾದರು. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.5.2021ರ ಬುಧವಾರ ಮಧ್ಯಾಹ್ನ 1.30 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.
ದುಃಖತಪ್ತ ಕುಟುಂಬ ವರ್ಗ
ಮೊ. : 98443 54331, 98802 95959, 98800 44600


# ಮಾಸ್ಕ್ ಹಾಕದವರಿಂದ 91 ಸಾವಿರ ದಂಡ




ಮಲೇಬೆನ್ನೂರು, ಮೇ 4- ಪಟ್ಟಣದಲ್ಲಿ ಲಾಕ್‌ಡೌನ್ ನಡುವೆಯೂ ಮಾಸ್ಕ್ ಧರಿಸದೆ ಸಂಚರಿಸುವ ಮತ್ತು ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘಿಸಿದ ವ್ಯಕ್ತಿಗಳಿಂದ ಇಲ್ಲಿನ ಪುರಸಭೆ ಅಧಿಕಾರಿಗಳು ಹಾಗೂ ಪೊಲೀಸರು ಮಂಗಳವಾರದವರೆಗೆ ಒಟ್ಟು 91,200 ರೂ. ದಂಡ ವಸೂಲಿ ಮಾಡಿದ್ದಾರೆ.

ಪಿಎಸ್‌ಐ ವೀರಬಸಪ್ಪ ಕುಸಲಾಪುರ ಅವರ ನೇತೃತ್ವದಲ್ಲಿ ಪೊಲೀಸರು ಕಳೆದ 5-6 ದಿನಗಳಲ್ಲಿ 664 ಕೇಸ್‌ಗಳನ್ನು ಹಾಕಿ, 64,700 ರೂ. ದಂಡ ವಸೂಲಿ ಮಾಡಿದರೆ, ಪುರಸಭೆ ಮುಖ್ಯಾಧಿಕಾರಿ ದಿನಕರ್ ಅವರ ನೇತೃತ್ವದಲ್ಲಿ ಪುರಸಭೆ ಅಧಿಕಾರಿಗಳು ಪಟ್ಟಣದಲ್ಲಿ ಮಾಸ್ಕ್ ಧರಿಸದವರಿಗೆ ಮತ್ತು ಅನಧಿಕೃತವಾಗಿ ಅಂಗಡಿ ತೆರೆದವರಿಗೆ ಹಾಕಿದ ದಂಡ 26.600 ರೂ.ಗಳಾಗಿರುತ್ತದೆ.

ಲಾಕ್‌ಡೌನ್ ನಿಯಮಗಳನ್ನು ಉಲ್ಲಂಘನೆ ಮಾಡಿ ರಸ್ತೆಯಲ್ಲಿ ವಿನಾಕಾರಣ ಸಂಚರಿಸಿದ ವಾಹನಗಳನ್ನು ಜಪ್ತಿ ಮಾಡಿದ ಪೊಲೀಸರು ನಂತರ ಅವರಿಗೆ ಅರಿವು ಮೂಡಿಸಿ, ಎಚ್ಚರಿಕೆ ನೀಡಿ ವಾಹನಗಳನ್ನು ಬಿಡುಗಡೆ ಮಾಡಿದ್ದಾರೆ. ಜೊತೆಗೆ ಮಲೇಬೆನ್ನೂರು, ವಿನಾಯಕ ನಗರ ಕ್ಯಾಂಪ್, ಹರಳಹಳ್ಳಿಯಲ್ಲಿ 3 ಅಂಗಡಿಗಳಿಗೆ ಕೇಸ್ ಹಾಕಿ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ ಎಂದು ಪಿಎಸ್‌ಐ ವೀರಬಸಪ್ಪ ತಿಳಿಸಿದ್ದಾರೆ.

**ಹೆಚ್ಚು ಜನ ಸೇರಬೇಡಿ:** ಸರ್ಕಾರದ ಮಾರ್ಗಸೂಚಿಯಂತೆ 50 ಜನರ ಸಮ್ಮುಖದಲ್ಲಿ ಮದುವೆಗಳನ್ನು ಮಾಡಿ, ಒಂದು ವೇಳೆ ಹೆಚ್ಚು ಜನ ಕಂಡು ಬಂದರೆ ದಂಡ ಹಾಕುತ್ತೇವೆ ಎಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

## ಹೊನ್ನಾಳಿ: ಸಿಡಿಲು ಬಡಿದು ಸಾವು

ಹೊನ್ನಾಳಿ, ಮೇ 4- ತಾಲ್ಲೂಕಿನ ಮಾದೇನಹಳ್ಳಿ ಜಮೀನಿನಲ್ಲಿ ಕುರಿ ಕಾಯುತ್ತಿದ್ದ ವ್ಯಕ್ತಿಗೆ ಸಿಡಿಲು ಬಡಿದು ಸಾವಿಗೀಡಾಗಿರುವ ಘಟನೆ ಇಂದು ಸಂಜೆ 5 ಗಂಟೆಗೆ ನಡೆದಿದೆ. ಶಿರ ತಾಲ್ಲೂಕು ಚಿತ್ರಲಿಂಗಯ್ಯ (24) ಎನ್ನುವ ವ್ಯಕ್ತಿ ಸಾವಿಗೀಡಾಗಿದ್ದು, ಈತ ಮೊಬೈಲ್ ಬಳಸುತ್ತಿದ್ದ ಕಿವಿಗೆ ಸಿಡಿಲು ಬಡಿದು ನಂತರ ಇಡೀ ದೇಹಕ್ಕೆ ಹಾನಿ ಮಾಡಿದೆ.

ಗ್ರಾಮದ ನಾಗರಾಜಪ್ಪ ಎಂಬುವವರ ಜಮೀನಿನಲ್ಲಿ ಸುಮಾರು 200 ಕುರಿಗಳ ಹಿಂಡು ಕಾಯುತ್ತಿದ್ದು, ಜೊತೆಗಿದ್ದ ಮತ್ತೊಬ್ಬನಿಗೆ ಯಾವುದೇ ಹಾನಿ ಸಂಭವಿಸಿಲ್ಲ ಎಂಬುದಾಗಿ ಹೊನ್ನಾಳಿ ಠಾಣೆಯಲ್ಲಿ ದೂರು ದಾಖಲಿಸಿದ ಎಸ್.ಐ.ಬಸವನಗೌಡ ದೂರು ದಾಖಲಿಸಿಕೊಂಡಿದ್ದಾರೆ.

## ನಗರದ ಯುವತಿ ಕೊನೆಯುಸಿರು

(1ನೇ ಪುಟದಿಂದ) ಯುವತಿಯ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಡ್ ಗಾಗಿ ಅಲೆದಾಟ: ಜಿಲ್ಲಾಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆ ಮಾಡಿದ್ದು, ನಾನ್ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ಸಿಗುತ್ತಿಲ್ಲ. ಇದರಿಂದ ಜನರು ಖಾಸಗಿ ಆಸ್ಪತ್ರೆಗಳನ್ನು ಸುತ್ತಿ ಬೆಡ್ ಖಾಲಿ ಇಲ್ಲ ಎನ್ನುವ ಉತ್ತರ ಸಿಗುತ್ತಿದೆ. ಅಲ್ಲದೆ ಜಿಲ್ಲಾಸ್ಪತ್ರೆಯ ಮುಂಭಾಗ ಬಹಳಷ್ಟು ಜನರು ಆಟೋಗಳಲ್ಲಿ, ಅಂಬ್ಯುಲೆನ್ಸ್ ಗಳಲ್ಲಿ ರೋಗಿಗಳನ್ನು ಹಾಕಿಕೊಂಡು ಬೆಡ್ ಸಿಗದೆ ಪರದಾಡುವ ಸ್ಥಿತಿ ತಲುಪಿದೆ.

## ಹೊರಗುತ್ತಿಗೆ ನೌಕರ ಆತ್ಮಹತ್ಯೆ

ದಾವಣಗೆರೆ, ಮೇ 4- ಮಾನಸಿಕ ಖಿನ್ನತೆಗೆ ಸೂಕ್ತ ಚಿಕಿತ್ಸೆ ಸಿಗದ ಹಿನ್ನೆಲೆಯಲ್ಲಿ ಜಗಳೂರು ತಾಲ್ಲೂಕು ಲಿಂಗಣ್ಣನಹಳ್ಳಿಯ ಸಮಾಜ ಕಲ್ಯಾಣ ಇಲಾಖೆ ಹೊರಗುತ್ತಿಗೆ ನೌಕರ ತಿಮ್ಮಣ್ಣ (46) ಎಂಬಾತ ಮನೆಯ ಚಾವಣಿಗೆ ನೇಣು ಬಿಗಿದುಕೊಂಡಿದ್ದಾರೆ. ಈ ಸಂಬಂಧ ಜಗಳೂರು ಪೊಲೀಸ್ ಠಾಣೆಯಲ್ಲಿ ಪತ್ನಿ ಗಿರಿಜಮ್ಮ ಪ್ರಕರಣ ದಾಖಲಿಸಿದ್ದಾರೆ.

**ಗಾಂಧಿನಗರ :** ಜಂಪೇನಹಳ್ಳಿಯ ರುದ್ರಾನಾಯ್ಕ ಭಾನುವಾರ ಮನೆಯಿಂದ ಹೊರ ಹೋದವರು ನಾಪತ್ತೆಯಾಗಿದ್ದರು. ದಾವಣಗೆರೆಯ ಅಶೋಕ ನಗರದ ದೊಡ್ಡ ಬೂದಿಹಾಳ್ ರಸ್ತೆಯಲ್ಲಿ ಜಾಲಿ ಗಿಡಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಹೊಟ್ಟೆ ನೋವು ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ಮಂಜುನಾಥ್ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಈಜಲು ಹೋಗಿ ಬಾಲಕ ಸಾವು

ಕೂಡ್ಲಿಗಿ, ಮೇ 4- ತಾಲ್ಲೂಕಿನ ಶಿವಪುರ ಗ್ರಾಮದ ಅರಣ್ಯ ಪ್ರದೇಶದಲ್ಲಿರುವ, ಕಲ್ಲಿನ ಕ್ವಾರಿಯ ಗುಂಡಿಯಲ್ಲಿ ಕೂಡ್ಲಿಗಿಯ ರಾಜೀವ್ ಗಾಂಧಿ ನಗರದ ಅಫ್ರಿದ್ (15) ಎಂಬ ಬಾಲಕನು ನೀರಿನಲ್ಲಿ ಈಜಲು ಹೋಗಿ ಗುಂಡಿಯಲ್ಲಿ ಮುಳುಗಿ ಮೃತಪಟ್ಟಿದ್ದಾನೆ.


**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


## ಹರಪನಹಳ್ಳಿ ತಾ. ಭೋವಿ ಸಮಾಜದ ಅಧ್ಯಕ್ಷರಾಗಿ ಎಂ.ಬಿ. ಅಂಜಿನಪ್ಪ ಆಯ್ಕೆ




ಹರಪನಹಳ್ಳಿ, ಮೇ 4- ತಾಲ್ಲೂಕು ಭೋವಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ಕಂಚಿಕೇರಿ ಎಂ.ಬಿ. ಅಂಜಿನಪ್ಪ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಅರಸಿಕೇರಿ ವಿ. ತಿಮ್ಮೇಶ, ಪ್ರಧಾನ ಕಾರ್ಯದರ್ಶಿ ಕೂಲಹಳ್ಳಿ ವೆಂಕಟೇಶ್, ಖಜಾಂಚಿಯಾಗಿ ಪೃಥ್ವೇಶ್ವರ ಪೂಜಾರ ನಾಗ ರಾಜ್, ಉಪಾಧ್ಯಕ್ಷರುಗಳಾಗಿ ಕೆರೆಗುಡಿಹಳ್ಳಿ ಶಿವಪ್ಪ, ಯು. ಬೇವಿನಹಳ್ಳಿ ಉಮಾಪತಿ, ನಂದಿಬೇವೂರು ಸಂಪತ್, ಚಿಗಟೇರಿ ಚಂದ್ರಶೇಖರ್ ಅಲಮರಸಿಕೇರಿ ಆಯ್ಕೆಯಾಗಿದ್ದಾರೆ. ಸಹ ಕಾರ್ಯದರ್ಶಿ ಬಿ. ಚಂದ್ರಶೇಖರ್, ಸಂಘಟನಾ ಕಾರ್ಯದರ್ಶಿ ನೀಲಗುಂದ ಬಿ. ತಿರುಪತಿ, ಸದಸ್ಯರುಗಳಾಗಿ ಪಿ. ಮಂಜನಾಥ, ಸಾವಿತ್ರಮ್ಮ ರೇಣುಕಮ್ಮ ದುರುಗಮ್ಮ ಆಯ್ಕೆಯಾಗಿದ್ದಾರೆ.


ಉಚ್ಚಂಗಿದುರ್ಗದ ರಾಮಪ್ಪನವರ ಅಧ್ಯಕ್ಷತೆಯಲ್ಲಿ ಕಂಚಿಕೇರಿಯಲ್ಲಿ ಈ ಆಯ್ಕೆ ಜರುಗಿತು. ಪುರಸಭಾ ಸದಸ್ಯ ಎಂ.ವಿ. ಅಂಜಿನಪ್ಪ. ಎಂ.ವಿ. ತಿಪ್ಪೇಶ್ ಇನ್ನಿತರರು ಹಾಜರಿದ್ದರು.

## ಪೌರ ಕಾರ್ಮಿಕರಿಗೆ ಕಿಟ್ ವಿತರಣೆ



ದಾವಣಗೆರೆ, ಮೇ 4- ಜಿಲ್ಲಾ ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷರೂ, ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕರೂ ಆದ ಹೆಚ್.ದಿವಾಕರ್ ಅವರು ತಮ್ಮ ಮಗ ಆದಿಸುಬ್ರಹ್ಮಣ್ಯನ ಹುಟ್ಟು ಹಬ್ಬವನ್ನು ಪೌರ ಕಾರ್ಮಿಕರಿಗೆ ಆಹಾರ ಧಾನ್ಯದ ಕಿಟ್‌ಗಳನ್ನು ಕೊಡುವ ಮೂಲಕ ಆಚರಿಸಿದರು. ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಎ.ಸಿ.ರಾಘವೇಂದ್ರ, ತಿರುಮಲ್ಲೇಶ್, ಎ.ಎಸ್.ಮಂಜುನಾಥ ಹಾಜರಿದ್ದರು.

## ಹಡಗಲಿ : ಪಿಎಸ್‌ಐ ನಾಯಕ ವರ್ಗ



ಹೂವಿನಹಡಗಲಿ, ಮೇ 4- ಇಲ್ಲಿನ ಪೊಲೀಸ್ ಠಾಣೆಯ ಪಿಎಸ್‌ಐ ಎಸ್.ಪಿ.ನಾಯಕ ಬಳ್ಳಾರಿಗೆ ವರ್ಗವಾಗಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ಬಂದೋಬಸ್ತ್ ವಿಚಾರವಾಗಿ ಎಸ್ಪಿ ಮುಂದಿನ ಆದೇಶದವರೆಗೆ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳುವಂತೆ ಆದೇಶಿಸಿದ್ದಾರೆ.

# ಸಿಬ್ಬಂದಿ ಕೊರತೆ : ಅಭಿವೃದ್ಧಿ ಕುಂಠಿತ



**ಹರಪನಹಳ್ಳಿ**

ಹರಪನಹಳ್ಳಿ, ಮೇ 4- ಗ್ರಾಮಗಳ ಆರ್ಥಿಕ ಹಾಗೂ ಭೌತಿಕ ಅಭಿವೃದ್ಧಿ ಕುಂಠಿತವಾಗಲು ಸಿಬ್ಬಂದಿ ಕೊರತೆ ಕಾರಣವಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರ ಐ. ಸುರೇಶ್ ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣದ ಗ್ರಾಮೀಣ ಕುಡಿಯುವ ನೀರು ಮತ್ತು ಗ್ರಾಮ ನೈರ್ಮಲ್ಯ ಇಲಾಖೆ ಉಪ ವಿಭಾಗೀಯ ಕಚೇರಿಯಲ್ಲಿ ಶೇ. 60 ಸಿಬ್ಬಂದಿ ಕೊರತೆಯಿದೆ. ನೇಮಕವಾದ ಆರು ಪೋಸ್ಟ್‌ಗಳಿಗೆ ಒಬ್ಬ ಇಂಜಿನಿಯರ್ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಒಬ್ಬರು ಎಫ್‌ಡಿಸಿ ಹಾಗೂ ಒಬ್ಬರು ಮ್ಯಾನೇಜರ್ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮ ಮಟ್ಟದ ಸಮಸ್ಯೆಗಳಿಗೆ ಸ್ಪಂದಿಸಲು ಅಸಾಧ್ಯವಾಗಿದೆ.

ಹೊರಗುತ್ತಿಗೆಯಲ್ಲಿ ನೇಮಕ ಮಾಡಿಕೊಳ್ಳಲು ಆದೇಶವಿದೆ. ಟೆಂಡರ್ ಕೂಡ ಕರೆಯಲಾಗಿದೆ. ಆದರೆ ಅನುಭವದ ಕೊರತೆ ಎದ್ದು ಕಾಣುವುದರ ಜೊತೆಗೆ, ಹೊರಗುತ್ತಿಗೆ ಸಿಬ್ಬಂದಿ ಮಧ್ಯದಲ್ಲಿಯೇ ಕೆಲಸ ಬಿಟ್ಟು ಹೋಗಬಹುದು. ಇದರಿಂದ ಮತ್ತೆ ಕಾರ್ಯನಿರ್ವಹಣೆಗೆ ದೊಡ್ಡ ಪೆಟ್ಟು ಬೀಳಬಹುದು. ಸಮಯಕ್ಕೆ ಸರಿಯಾಗಿ ಕಾರ್ಯ ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ ಎಂದು ತಮ್ಮ ಸಮಸ್ಯೆ ತಿಳಿಸಿದರು. ಸರ್ಕಾರ ಖಾಯಂ ಸಿಬ್ಬಂದಿಗಳನ್ನು ಅವಶ್ಯಕತೆಗೆ ತಕ್ಕಂತೆ ನೀಡಿದರೆ ಗ್ರಾಮಗಳ ಅಭಿವೃದ್ಧಿ ಸುಗಮವಾಗಲು ಸಾಧ್ಯ. ಈ ಬಗ್ಗೆ ಸರ್ಕಾರ ಗಮನ ಹರಿಸಲಿ ಎನ್ನುವುದು ನಮ್ಮ ಅಳಲಾಗಿದೆ ಎಂದು ಹೇಳಿದರು.

# ಆಕ್ಸಿಜನ್ ಬೆಡ್‌ಗಾಗಿ ಬೆಡ್‌ಗಾಗಿ ವೆಯ್ಟಿಂಗ್ ಲಿಸ್ಟ್

**(1ನೇ ಪುಟದಿಂದ)** ಐ.ಸಿ.ಯು., ವೆಂಟಿಲೇಟರ್ ಬೆಡ್‌ಗಳು ತುಂಬಿವೆ. ಹೊಸ ರೋಗಿಗಳು ಬಂದರೆ ಬೆಡ್‌ಗಾಗಿ ಕಾಯ ಬೇಕಿದೆ. ರಾಣೇಬೆನ್ನೂರು, ಹಾವೇರಿ, ಹರಪನಹಳ್ಳಿ ಸೇರಿದಂತೆ ಹಲವೆಡೆಗಳಿಂದಲೂ ರೋಗಿಗಳು ಜಿಲ್ಲಾಸ್ಪತ್ರೆಗೆ ಬರುತ್ತಿದ್ದಾರೆ

ಬೆಡ್‌ಗಳು ತುಂಬಿದ್ದರೂ ಸಹ ಪ್ರತಿದಿನ 15-20 ಜನ ಗುಣಮುಖರಾಗಿ ಬಿಡುಗಡೆಯಾಗುತ್ತಿದ್ದಾರೆ. ಅಲ್ಲದೇ, ಆಕ್ಸಿಜನ್ ಮಟ್ಟ ಸುಧಾರಣೆಯಾದಂತೆ ರೋಗಿಗಳನ್ನು ಸಾಮಾನ್ಯ ಬೆಡ್‌ಗಳಿಗೆ ಕಳಿಸಲಾಗುತ್ತಿದೆ. ಇವರ ಬೆಡ್‌ಗಳು ಸೋಂಕಿತರಿಗೆ ಸಿಗುತ್ತಿವೆ ಎಂದು ಸಿ.ಜಿ. ಆಸ್ಪತ್ರೆಯ ಆರ್.ಎಂ.ಒ. ಡಾ. ಎಲ್.ಎಂ. ಪಾಟೀಲ್ ತಿಳಿಸಿದ್ದಾರೆ.

ಕೆಲವರು ಕೊರೊನಾ ಸೋಂಕು ಬಂದಾಗ ಮನೆಯಲ್ಲೇ ಚಿಕಿತ್ಸೆ ಪಡೆಯುವ ಪ್ರಯತ್ನ ನಡೆಸಿ, ಉಲ್ಬಣಿಸಿದಾಗ ಜಿಲ್ಲಾಸ್ಪತ್ರೆಗೆ ಬರುತ್ತಿದ್ದಾರೆ. ಕೊರೊನಾ ಬಂದಾಗ ಮೊದಲು ಪಿ.ಹೆಚ್.ಸಿ. ಕೇಂದ್ರಗಳಿಂದ ಸಲಹೆ ಪಡೆಯಬೇಕು. ಅಲ್ಲಿನ ಮಾರ್ಗದರ್ಶನದಂತೆ ಆಸ್ಪತ್ರೆ ಇಲ್ಲವೇ ಮನೆಯಲ್ಲೇ ಪ್ರತ್ಯೇಕವಾಗಿದ್ದು ಚಿಕಿತ್ಸೆ ಪಡೆಯುವ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು ಎಂದವರು ಹೇಳಿದ್ದಾರೆ.

ಆಕ್ಸಿಜನ್ ಬೆಡ್‌ಗಳ ಅಗತ್ಯ ಎಲ್ಲರಿಗೂ ಇರುವುದಿಲ್ಲ. ಆಕ್ಸಿಜನ್ ಮಟ್ಟ ಶೇ.90ಕ್ಕಿಂತ ಕಡಿಮೆಯಾದಾಗ ಮಾತ್ರ ಅಗತ್ಯ ಬರುತ್ತದೆ ಎಂದಿರುವ ಅವರು, ಪ್ರಸಕ್ತ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ 20 ಹೆಚ್ಚಿನ ಆಕ್ಸಿಜನ್ ಬೆಡ್‌ಗಳನ್ನು ಹಾಕಲಾಗಿದೆ. ಇನ್ನೊಂದು ವಾರ್ಡ್ ಸಿದ್ಧಪಡಿಸಿ 30 ಬೆಡ್ ಅಳವಡಿಕೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಈ ಬಗ್ಗೆ ಪರಿಶೀಲನೆ ನಡೆಸಿದ್ದಾರೆ ಎಂದು ಹೇಳಿದ್ದಾರೆ. ಇನ್ನೊಂದು ತಿಂಗಳ ಕಾಲ ಜನರು ಕೊರೊನಾ ಸೋಂಕು ಬರದಂತೆ ಪೂರ್ಣ ಮುನ್ನೆಚ್ಚರಿಕೆ ವಹಿಸಬೇಕು. ಒಂದೊಮ್ಮೆ ಸೋಂಕು ಬಂದರೆ ಪಿ.ಎಸಿ. ವೈದ್ಯರ ಸಲಹೆಯಂತೆ ನಡೆದುಕೊಳ್ಳಬೇಕು ಎಂದು ಪಾಟೀಲ್ ಕಿವಿಮಾತು ಹೇಳಿದ್ದಾರೆ.

# ನಿಯಮ ಗಾಳಿಗೆ ತೂರಿ ಸಂತೆ ಆವರಣದಲ್ಲಿ ವ್ಯಾಪಾರ: ಅಂಗಡಿ ತೆರವುಗೊಳಿಸಿದ ಅಧಿಕಾರಿಗಳು





ಹರಿಹರ, ಮೇ 4- ಕೊರೊನಾ ತಡೆಗೆ ಸರ್ಕಾರ ಸಂತೆ, ಜಾತ್ರೆ, ಸೇರಿದಂತೆ ಹೆಚ್ಚಾಗಿ ಜನರು ಸೇರುವಂತಹ ಸ್ಥಳಗಳಿಗೆ ನಿರ್ಬಂಧಗಳನ್ನು ಹಾಕಿದ್ದು, ಇದ್ಯಾವುದೂ ಲೆಕ್ಕಕ್ಕೇ ಇಲ್ಲ ಎನ್ನುವಂತೆ ವ್ಯಾಪಾರಿಗಳು ಎಂದಿನಂತೆ ಶಿವಮೊಗ್ಗ ರಸ್ತೆಯ ಸಂತೆ ಆವರಣದಲ್ಲಿ ವ್ಯಾಪಾರ, ವಹಿವಾಟು ಆರಂಭಿಸಿದ್ದು, ಸಾರ್ವಜನಿಕರು ಖರೀದಿಗೆ ಮುಂದಾದ ಸನ್ನಿವೇಶ ಹರಿಹರ ನಗರದಲ್ಲಿ ಇಂದು ಕಂಡು ಬಂತು.

ಕೊರೊನಾ ನಿಯಂತ್ರಿಸಲು ಸರ್ಕಾರದ ಆದೇಶವನ್ನು ಸಾರ್ವಜನಿಕರು ಮತ್ತು ಅಧಿಕಾರಿ ವರ್ಗದವರು ಚಾಚೂ ತಪ್ಪದೇ ಪಾಲನೆ ಮಾಡಿದಾಗ ಮಾತ್ರ ರೋಗವನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುತ್ತದೆ. ಒಂದು ಕಡೆ ಸರ್ಕಾರ ದಿನಕ್ಕೊಂದು ಕಾನೂನು ಜಾರಿಗೆ ತರುತ್ತಿದ್ದು, ಸಾರ್ವಜನಿಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಪಾಲನೆಗೆ ಆದೇಶಿಸುತ್ತಿದೆ. ಆದರೆ ನಗರದಲ್ಲಿ ಇಂದು ಅಧಿಕಾರಿಗಳ ಹಾಗೂ ಸಾರ್ವಜನಿಕರ ನಿರ್ಲಕ್ಷ್ಯದ ಫಲವಾಗಿ ಕೊರೊನಾ ಕರ್ಫ್ಯೂ ನಿಯಮಗಳನ್ನು ಗಾಳಿಗೆ ತೂರಿದ ವ್ಯಾಪಾರಸ್ಥರು ಹಾಗೂ ಜನರು, ಸಂತೆಯ ಆವರಣದಲ್ಲಿ ಯಾವುದೇ ನಿಯಮ ಪಾಲಿಸಿದೆ ವ್ಯಾಪಾರ, ವಹಿವಾಟು ನಡೆಸಿದ ಘಟನೆ ನಡೆಯಿತು.

ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ, ಹೆಚ್. ಶಿವಪ್ಪ ವೃತ್ತ, ದೇವಸ್ಥಾನ ರಸ್ತೆ, ಹರಪನಹಳ್ಳಿ ರಸ್ತೆಯಲ್ಲಿ ಸಾರ್ವಜನಿಕರು ವ್ಯಾಪಾರ ಮಾಡುವುದಕ್ಕೆ ಮುಂದಾದರು. ಇದರಲ್ಲಿ ಕೆಲವರು ಮಾಸ್ಕ್ ಧರಿಸಿಕೊಂಡಿದ್ದರೆ, ಕೆಲವರು ಧರಿಸಿರಲಿಲ್ಲ. ಕೆಲವು ಅಂಗಡಿಗಳಲ್ಲಿ ಯಾವುದೇ ಅಂತರವನ್ನು ಸಹ ಕಾಯ್ದುಕೊಂಡಿರಲಿಲ್ಲ. ಇದನ್ನು ತಡೆಯಲು ನಗರಸಭೆಯ ಅಧಿಕಾರಿಗಳಾಗಲೀ, ಮತ್ತು ತಾಲ್ಲೂಕು ಆಡಳಿತ ಅಧಿಕಾರಿಗಳ ತಂಡವಾಗಲೀ ಮುಂದಾಗದೆ ಇರುವುದನ್ನು ಗಮನಿಸಿ, ಪತ್ರಕರ್ತರು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮತ್ತು ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ ಅವರ ಗಮನಕ್ಕೆ ತಂದರು. ನಂತರ ನಗರಸಭೆ, ತಾಲ್ಲೂಕು ಆಡಳಿತ ಹಾಗೂ ಪೊಲೀಸ್ ಅಧಿಕಾರಿಗಳ ತಂಡವು ಬಂದ್ ಮಾಡಿಸಲು ಮುಂದಾದರು. ಮಧ್ಯಾಹ್ನ ಮತ್ತೆ ಎಲ್ಲಾ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟವು.

ಸಂತೆಯ ಆವರಣದಲ್ಲಿನ ಅಂಗಡಿ ಮುಂಗಟ್ಟುಗಳನ್ನು ತೆರವು ಮಾಡಿಸಲು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್ ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಪಿಎಸ್ಐ ಸುನಿಲ್ ಬಸವರಾಜ್ ತೇಲಿ, ನಗರಸಭೆ ಸಿಬ್ಬಂದಿಗಳಾದ ಮಂಜುನಾಥ್, ವಸಂತ್, ಕಿರಣ್, ಪ್ರಕಾಶ್, ರಮೇಶ್, ಪೊಲೀಸ್ ಸಿಬ್ಬಂದಿಗಳಾದ ಸತೀಶ್, ದ್ವಾರಕೀಶ್, ಮಂಜುನಾಥ್, ದೇವರಾಜ್, ನಾಗರಾಜ್, ಸಂತೋಷ್ ಹಾಗು ಇತರರ ತಂಡವು ಅಂಗಡಿ ಮುಂಗಟ್ಟುಗಳನ್ನು ತೆರವು ಮಾಡಿಸಿತು.

> ಕಳೆದ ಕೊರೊನಾ ವೇಳೆ ಸ್ವತಃ ಜಿಲ್ಲಾಧಿಕಾರಿಗಳೇ ವಾರದಲ್ಲಿ 2-3 ಬಾರಿ ಆಗಮಿಸಿ, ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು. ಆದರೆ ಈ ಬಾರಿ ಯಾವುದೇ ಸಭೆ ಆಯೋಜನೆ ಮಾಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕಾರಣವಾಗಿದೆ ಎನಿಸುತ್ತದೆ.
>
> **ಸಾರ್ವಜನಿಕರ ಅಭಿಪ್ರಾಯ** : ಇಂದು ಸಂತೆಯ ಆವರಣದಲ್ಲಿ ಒಮ್ಮಿಂದೊಮ್ಮೆಲೆ ಹೆಚ್ಚು ಅಂಗಡಿಗಳನ್ನು ತೆರೆದುಕೊಂಡು ವ್ಯಾಪಾರ ವಹಿವಾಟು ಆರಂಭಿಸಿದರು. ಇದರಿಂದಾಗಿ ಜನದಟ್ಟಣೆಯ ಪ್ರಮಾಣ ಹೆಚ್ಚಾಗಿದೆ. ವ್ಯಾಪಾರಸ್ಥರ ತಕಡಿಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಇಲ್ಲಿಯವರೆಗೆ ಸುಮಾರು 40 ಸಾವಿರ ರೂಪಾಯಿಗೂ ಹೆಚ್ಚು ದಂಡವನ್ನು ಹಾಕಲಾಗಿದೆ. ನಂತರದಲ್ಲಿ ನಗರಸಭೆ, ತಾಲ್ಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳ ತಂಡ ಸೇರಿ ಸಂತೆಯ ಆವರಣದಲ್ಲಿ ಇದ್ದ ಅಂಗಡಿಗಳನ್ನು ತೆರವು ಮಾಡಲಾಗಿದೆ.
>
> **- ಎಸ್. ಲಕ್ಷ್ಮೀ, ಪೌರಾಯುಕ್ತರು, ನಗರಸಭೆ, ಹರಿಹರ.**

# ಐಪಿಎಲ್ ಮುಂದೂಡಿಕೆ ಬೆನ್ನಲ್ಲೇ ಯುಎಇಗೆ ಟಿ-20 ವರ್ಗಾವಣೆ

ನವದೆಹಲಿ, ಮೇ 4 – ಕೊರೊನಾ ಕಾರಣದಿಂದಾಗಿ ಐ.ಪಿ.ಎಲ್. ಪಂದ್ಯಾವಳಿ ಮುಂದೂಡಿಕೆಯಾದ ಬೆನ್ನಲ್ಲೇ, ಈ ವರ್ಷ ಭಾರತದಲ್ಲಿ ನಡೆಯಬೇಕಿದ್ದ ಟಿ20 ವಿಶ್ವಕಪ್ ಪಂದ್ಯಾವಳಿ ಯು.ಎ.ಇ.ಗೆ ವರ್ಗಾವಣೆಯಾಗಿದೆ.

ನವೆಂಬರ್ ತಿಂಗಳಲ್ಲಿ ಪಂದ್ಯಾವಳಿ ನಡೆಯಲಿದ್ದು, ಆ ವೇಳೆಗೆ 3ನೇ ಅಲೆ ಬರಲಿದೆ ಎಂದು ಪರಿಣಿತರು ಹೇಳಿದ್ದಾರೆ. ಹೀಗಾಗಿ ಯಾವುದೇ ತಂಡ ಭಾರತಕ್ಕೆ ಬರಲು ಒಲವು ಹೊಂದಿಲ್ಲ ಎಂದು ಬಿ.ಸಿ.ಸಿ.ಐ. ತಿಳಿಸಿದೆ.

ಒಂದು ತಿಂಗಳ ಸಮಯದಲ್ಲಿ ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ. ಈ ನಡುವೆ, ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ 16ರ ವಯಸ್ಸಿನ ಒಳಗಿನವರ ಪಂದ್ಯಾವಳಿಯನ್ನು ನಡೆಸುವ ಬಗ್ಗೆಯೂ ಅತಂತ್ರ ಪರಿಸ್ಥಿತಿ ಉಂಟಾಗಿದೆ.

ಬಿ.ಸಿ.ಸಿ.ಐ.ನ ಉನ್ನತ ಅಧಿಕಾರಿಗಳು ಇತ್ತೀಚೆಗೆ ಕೇಂದ್ರ ಸರ್ಕಾರದ ಉನ್ನತರ ಬಳಿ ಟಿ20 ಪಂದ್ಯಾವಳಿ ಕುರಿತು ಚರ್ಚಿಸಿದ್ದರು. ಈ ಸಂದರ್ಭದಲ್ಲಿ ಪಂದ್ಯವನ್ನು ಯು.ಎ.ಇ.ಗೆ ವರ್ಗಾಯಿಸುವ ಬಗ್ಗೆ ಬಹುತೇಕ ಅಂತಿಮ ನಿರ್ಧಾರಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಐ.ಪಿ.ಎಲ್. ಪಂದ್ಯಾವಳಿ ಆರಂಭವಾದ ನಾಲ್ಕು ವಾರಗಳಲ್ಲೇ, ಭಾಗವಹಿಸಿದ್ದ ಹಲವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಹೀಗಾಗಿ ಜಾಗತಿಕ ಮಟ್ಟದ ಪಂದ್ಯಾವಳಿಯನ್ನು ಭಾರತದಲ್ಲಿ ಆಯೋಜಿಸುವುದು ಸೂಕ್ತವಲ್ಲ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಬಿ.ಸಿ.ಸಿ.ಐ.ನ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ. ನವೆಂಬರ್ ವೇಳೆಗೆ ಮೂರನೇ ಕೊರೊನಾ ಅಲೆ ಬರುವ ಸಾಧ್ಯತೆ ಇದೆ. ಹೀಗಾಗಿ ಪಂದ್ಯಾವಳಿಯನ್ನು ಯು.ಎ.ಇ .ಗೆ ವರ್ಗಾಯಿಸುವುದೇ ಸೂಕ್ತ ಎಂದವರು ಹೇಳಿದ್ದಾರೆ.

ಸೆಪ್ಟೆಂಬರ್ ವೇಳೆಗೆ ಕೊರೊನಾದ ಮೂರನೇ ಅಲೆ ಬರಲಿದೆ ಎಂದು ಪರಿಣಿತರು ಎಚ್ಚರಿಸಿರುವುದಾಗಿ ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ. ಐ.ಪಿ.ಎಲ್. ಪಂದ್ಯಾವಳಿಯಲ್ಲಿ ಪಾಲ್ಗೊಂಡ ಹಲವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು. ಇದರಿಂದಾಗಿ ಪಂದ್ಯಾವಳಿಯನ್ನು ಅಮಾನತ್ತುಗೊಳಿಸಲಾಗಿದೆ. ಆಟಗಾರರನ್ನು ಅವರ ದೇಶಗಳಿಗೆ ಸುರಕ್ಷಿತವಾಗಿ ಕಳಿಸಲು ಕ್ರಮ ತೆಗೆದುಕೊಳ್ಳುವುದಾಗಿ ಬಿಸಿಸಿಐ ಹೇಳಿದೆ.

# ದ್ವಿತೀಯ ಪಿಯು ಪರೀಕ್ಷೆ ಮುಂದೂಡಿಕೆ

**(1ನೇ ಪುಟದಿಂದ)** ಸಚಿವ ಸುರೇಶ್ ಕುಮಾರ್, ಪರೀಕ್ಷಾ ದಿನಾಂಕಗಳನ್ನು ಪರೀಕ್ಷೆಗಳು ಆರಂಭವಾಗುವುದಕ್ಕೆ 15-20 ದಿನಗಳ ಮುನ್ನವೇ ಪ್ರಕಟಿಸಲಾಗುವುದು ಎಂದರು.

ಈಗಾಗಲೇ ಪರೀಕ್ಷೆಗೆ ಸಜ್ಜಾಗಿದ್ದ ವಿದ್ಯಾರ್ಥಿಗಳು ಪರೀಕ್ಷೆ ಮುಂದೂಡಿರುವುದರಿಂದ ಯಾವುದೇ ಕಾರಣಕ್ಕೂ ವಿಚಲಿತರಾಗದೇ ಶ್ರದ್ಧೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಎಂದಿನಂತೆ ಮುಂದುವರೆಸಬೇಕೆಂದು ಅವರು ಮನವಿ ಮಾಡಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆಗಳ ನಂತರ ನಡೆಸಬೇಕೆಂದು ನಿರ್ಧರಿಸಲಾಗಿದ್ದ ಪ್ರಥಮ ಪಿಯು ಪರೀಕ್ಷೆಗಳನ್ನು ಕೊರೊನಾ ಹಿನ್ನೆಲೆಯಲ್ಲಿ ರದ್ದುಪಡಿಸಲಾಗಿದ್ದು, ಪ್ರಥಮ ವರ್ಷದ ಪಿಯು ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡುವ ನಿರ್ಧಾರವನ್ನೂ ಇದೇ ಸಂದರ್ಭದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಸುರೇಶ್ ಕುಮಾರ್ ತಿಳಿಸಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದ ಮುನ್ನ ಬ್ರಿಡ್ಜ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಹಾಗೆಯೇ ಇಲಾಖೆಯ ಯೂಟ್ಯೂಬ್ ಚಾನಲ್‌ಗಳ ಮೂಲಕ ಈಗಿನಿಂದಲೇ ಈ ಬ್ರಿಡ್ಜ್ ಕೋರ್ಸ್‌ಗಳು ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದೂ ಅವರು ತಿಳಿಸಿದರು.

ಪರೀಕ್ಷೆಗಳನ್ನು ಮುಂದೂಡಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸತತವಾಗಿ ಸಂಪರ್ಕದಲ್ಲಿರುವಂತೆ ಉಪನ್ಯಾಸಕರು ವರ್ಕ್ ಫ್ರಂ ಹೋಂ ಕೆಲಸ ಮಾಡಲು ಸೂಚಿಸಲಾಗಿದೆ. ವಿದ್ಯಾರ್ಥಿಗಳೊಂದಿಗೆ ನಿರಂತರ ಸಂಪರ್ಕ, ಇಲಾಖೆಯ ಪಠ್ಯ ಬೋಧನಾ ಕ್ರಮಗಳನ್ನು ಅವರೊಂದಿಗೆ ಚರ್ಚಿಸುವುದು ಸೇರಿದಂತೆ ಎಲ್ಲ ಆಡಳಿತಾತ್ಮಕ ಕ್ರಮಗಳಿಗೆ ಅವರು ಸದಾ ಲಭ್ಯವಾಗಬೇಕಿದೆ. ಹಾಗೆಯೇ ಕೊರೊನಾ ಕರ್ತವ್ಯಗಳಲ್ಲಿ ತೊಡಗಿಸಿಕೊಂಡಿರುವ ಉಪನ್ಯಾಸಕರು ತಮ್ಮ ಕೊರೊನಾ ಜವಾಬ್ದಾರಿಗಳನ್ನು ಪೂರೈಸಬೇಕಿದೆ ಎಂದು ಸುರೇಶ್ ಕುಮಾರ್ ತಿಳಿಸಿದರು.

ಮೇ 24ರಿಂದ ಜೂ.16ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ನಡೆಸಲು ಈ ಮೊದಲು ನಿರ್ಧರಿಸಲಾಗಿತ್ತು. ರಾಜ್ಯಾದ್ಯಂತ 1047 ಕೇಂದ್ರಗಳಲ್ಲಿನ 5562 ಕಾಲೇಜುಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಎಲ್ಲ ಸಿದ್ಧತೆಗಳನ್ನು ಕೈಗೊಳ್ಳಲಾಗಿತ್ತು.

# ಸದ್ಯಕ್ಕೆ ಲಾಕ್‌ಡೌನ್ ಇಲ್ಲ

**(1ನೇ ಪುಟದಿಂದ)** ದಿನದಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದ್ದಾರೆ. ಬೆಡ್, ಆಕ್ಸಿಜನ್ ಹಾಗೂ ರೆಮ್‌ಡಿಸಿವಿರ್, ಇವನ್ನು ದಂಧೆ ಮಾಡುವ ಒಂದು ವರ್ಗವಿದೆ. ಇವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಈ ಎಲ್ಲಾ ಜಿಲ್ಲೆಗಳಲ್ಲೂ ಕೋವಿಡ್‌ಗಾಗಿ ಮೀಸಲಿರಿಸಿ ಹಾಸಿಗೆಗಳನ್ನು ಹೆಚ್ಚಿಸಲು ಆದೇಶಿಸಿದ್ದೇನೆ. ಕಳೆದ ಎರಡು ದಿನಗಳಿಂದ ಸತತವಾಗಿ ಸಭೆಗಳನ್ನು ನಡೆಸಿ, ಸೋಂಕು ನಿವಾರಣೆಗೆ ಕ್ರಮ ಕೈಗೊಳ್ಳುತ್ತಿದ್ದೇನೆ ಎಂದರು.

ತಕ್ಷಣವೇ ವೈದ್ಯರು ಹಾಗೂ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲು ಸಂಪುಟ ತೀರ್ಮಾನಿಸಿದೆ ಎಂದರು. ಇದರ ಜೊತೆಗೆ ಆಕ್ಸಿಜನ್ ಕೊರತೆ ನಿವಾರಿಸುವ ಜವಾಬ್ದಾರಿಯನ್ನು ಸಚಿವ ಜಗದೀಶ ಶೆಟ್ಟರ್ ಅವರಿಗೂ, ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಹೆಚ್ಚಿಸುವ ಹೊಣೆಯನ್ನು ಬಸವರಾಜ್ ಬೊಮ್ಮಾಯಿ ಹಾಗೂ ಅಶೋಕ್ ಅವರಿಗೆ ನೀಡಲಾಗಿದೆ. ವಾರ್ ರೂಂ ನಿರ್ವಹಣೆಯನ್ನು ಅರವಿಂದ್ ಲಿಂಬಾವಳಿ ಅವರು ಮಾಡಲಿದ್ದಾರೆ ಎಂದರು.

# ಪತ್ರಕರ್ತರು ಮುಂಚೂಣಿ ಕಾರ್ಯಕರ್ತರು : ಸಿಎಂ ಘೋಷಣೆ



**(1ನೇ ಪುಟದಿಂದ)** ಮುಖ್ಯಮಂತ್ರಿಗಳು ಕೈಗೊಂಡ ಕ್ರಮವನ್ನು ಸ್ವಾಗತಿಸಿರುವ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಯಡಿಯೂರಪ್ಪ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಪತ್ರಕರ್ತರನ್ನು ಕೋವಿಡ್ ಪರಿಸ್ಥಿತಿ ನಿರ್ವಹಣೆ ಮಾಡುವ ಮುಂಚೂಣಿ ಕಾರ್ಯಕರ್ತರು ಎಂದು ಪರಿಗಣಿಸಲು ಕ್ರಮ ಕೈಗೊಂಡಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ದಾವಣಗೆರೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ ಧನ್ಯವಾದ ಹೇಳಿದ್ದಾರೆ. ಪತ್ರಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಮುಖ್ಯಮಂತ್ರಿ ಮತ್ತು ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರುಗಳನ್ನು ಸಂಘದ ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಉಪಾಧ್ಯಕ್ಷ ಹೆಚ್.ಎಂ.ಪಿ. ಕುಮಾರ್, ಖಜಾಂಚಿ ಮಾಗನೂರು ಮಂಜಪ್ಪ ಅವರುಗಳು ಕೃತಜ್ಞತೆ ಸಲ್ಲಿಸಿದ್ದಾರೆ.

# ಕಸದ ವಾಹನದಲ್ಲಿ ಶವ ರವಾನೆ

**(1ನೇ ಪುಟದಿಂದ)** ಆಸ್ಪತ್ರೆಯ ಹೊರಗೆ ಅವರು ಹಠಾತ್ತನೆ ಕುಸಿದು ಸಾವನ್ನಪ್ಪಿದರು. ತಕ್ಷಣ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಯಿತು.

ಪರೀಕ್ಷೆ ನಡೆಸಿದಾಗ ವ್ಯಕ್ತಿ ಕೊರೊನಾದಿಂದ ಸಾವನ್ನಪ್ಪಿದ್ದು ಕಂಡು ಬಂತು. ಅಗತ್ಯ ಪ್ರಕ್ರಿಯೆಗಳ ನಂತರ ಮೃತದೇಹವನ್ನು ಕಿನ್ಹಿ ಗ್ರಾಮದ ಅಧಿಕಾರಿಗಳಿಗೆ ನೀಡಲಾಯಿತು. ಅವರು ಆಂಬ್ಯುಲೆನ್ಸ್ ಹಾಗೂ ಖಾಸಗಿ ವಾಹನ ಪಡೆಯಲು ಪ್ರಯತ್ನ ನಡೆಸಿದರು. ಕೊನೆಗೆ ಕಸದ ಗಾಡಿಯಲ್ಲಿ ಮೃತದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಾಗಿದೆ.

# ಕರುಣಾದಿಂದ ಬಡವರಿಗೆ ಆಹಾರ ವಿತರಣೆ



ದಾವಣಗೆರೆ, ಮೇ 4- ಕೋವಿಡ್‌ನಿಂದ ಬಡವರು ಹಾಗು ಕೂಲಿನಾಲಿ ಮಾಡುವವರ ಜೀವನ ಸಂಕಷ್ಟದಲ್ಲಿದ್ದು, ಕರುಣಾ ಟ್ರಸ್ಟ್ ವತಿಯಿಂದ ಪ್ರತಿದಿನ 250 ಜನ ಬಡವರಿಗೆ ಅವರು ಇದ್ದಲ್ಲಿಯೇ ತೆರಳಿ ಒಂದು ಹೊತ್ತಿನ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಮಾಜಿ ಎಂಎಲ್‌ಸಿ ಮುದೇಗೌಡ್ರ ವೀರಭದ್ರಪ್ಪನವರು ದಿನಕ್ಕೆ 5,000 ರೂಪಾಯಿಯಂತೆ 5 ದಿನಗಳ ಕಾಲ ಊಟ ಒದಗಿಸಲು ಟ್ರಸ್ಟ್‌ಗೆ ಧನ ಸಹಾಯ ಮಾಡಿದ್ದಾರೆ. ಟ್ರಸ್ಟ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತದೆ. ಊಟ ತಯಾರು ಮಾಡಿ ಟ್ರಸ್ಟ್‌ಗೆ ನೀಡುವಲ್ಲಿ ಸ್ಫೂರ್ತಿ ಸೇವಾ ಟ್ರಸ್ಟ್‌ನ ಸತ್ಯನಾರಾಯಣ್ ಅವರು ಪ್ರಮುಖ ಪಾತ್ರವಹಿಸಿದ್ದು, ಟ್ರಸ್ಟ್ ಅವರಿಗೂ ಕೃತಜ್ಞತೆ ಸಲ್ಲಿಸುತ್ತದೆ ಎಂದು ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

ಧನ ಸಹಾಯವಿತ್ತು ಸಹಕರಿಸುವವರು ಟ್ರಸ್ಟಿನ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು. ಒಂದು ದಿನಕ್ಕೆ 250 ಜನರಿಗೆ ಊಟ ಒದಗಿಸಲು 5,000 ರೂಪಾಯಿ ಆಗಲಿದ್ದು, ದಾನಿಗಳು ಅದಕ್ಕಿಂತ ಹೆಚ್ಚು ಅಥವಾ ಕಡಿಮೆ ಹಣವನ್ನು ಸಹ ನೀಡಿ ರಶೀದಿ ಪಡೆಯಬಹುದು. ಕರೆ ಮಾಡಿದಲ್ಲಿ ಮನೆಗೇ ಬಂದು ಹಣ ಸ್ವೀಕರಿಸಲಾಗುವುದು.

ಹೆಚ್ಚಿನ ಮಾಹಿತಿಗೆ ವೀಣಾ ವ್ಯವಸ್ಥಾಪಕರು, ಮೊ: 9110455199 ಸಂಪರ್ಕಿಸುವುದು. ಅಥವಾ ಹಣವನ್ನು ಬ್ಯಾಂಕಿನ ಖಾತೆಗೂ ಜಮಾ ಮಾಡಬಹುದು. Karuna jeeva kalyana trust. Davanagere, AC no. 50100332805356, Ifsc HDFC 0000403, HDFC bank, Hemareddy complex boys hostel road Davanagere.

# ವೆಂಟಿಲೇಟರ್ ಸಿಗದೇ ಸಾವು

**(1ನೇ ಪುಟದಿಂದ)** ವೆಂಟಿಲೇಟರ್ ಗಾಗಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದ. ವೆಂಟಿಲೇಟರ್ ಗಾಗಿ ಸಾಕಷ್ಟು ಪ್ರಯತ್ನ ನಡೆಸಿದರೂ ಸಹ ಜಿಲ್ಲಾಸ್ಪತ್ರೆ ಸೇರಿದಂತೆ ಖಾಸಗಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸಿಗದೇ ಯುವಕ ಕೊನೆಯುಸಿರೆಳೆದಿದ್ದಾನೆ. ಜಿಲ್ಲೆಯಲ್ಲಿ ಕೋವಿಡ್ ರೋಗಿಗಳಿಗೆ ವೆಂಟಿಲೇಟರ್ ಸಿಗದೇ ಸಾವನ್ನಪ್ಪುತ್ತಿರುವುದು ನಿಂತಿಲ್ಲ.

# ಧರಣಿ ನಡೆಸುವ ಎಚ್ಚರಿಕೆ ಮಾಹಿತಿ

**(1ನೇ ಪುಟದಿಂದ)** ಬಿಬಿಎಂಪಿ ಕಚೇರಿ ಎದುರು ಧರಣಿ ನಡೆಸುತ್ತೇನೆ ಎಂದು ಎಚ್ಚರಿಸಿದ್ದೆ. ಆನಂತರವೇ ಮಾಹಿತಿ ನೀಡಲಾಯಿತು ಎಂದವರು ಹೇಳಿದ್ದಾರೆ.

# ದೊಡ್ಡವರಿದ್ದರೂ ಬಿಡುವುದಿಲ್ಲ

**(1ನೇ ಪುಟದಿಂದ)** ಎಂದು ಉಪ ಮುಖ್ಯಮಂತ್ರಿ ಅಶ್ವತ್ಥ ನಾರಾಯಣ ಹೇಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಜಯನಗರ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದ್ದು, ರೋಹಿತ್ ಹಾಗೂ ನೇತ್ರ ಎಂಬುವವರನ್ನು ಬಂಧಿಸಲಾಗಿದೆ. ದಂಧೆಯಲ್ಲಿ ಭಾಗಿಯಾದ ಇತರರ ತೀವ್ರ ಶೋಧ ನಡೆಸಲಾಗುತ್ತಿದೆ.

# ಲೋಕವಾರ್ತೆಯ ಮಾಯಪ್ಪ ನಿಧನ

ಬೆಳಗಾವಿ, ಮೇ 4- ಬೆಳಗಾವಿಯ ಕನ್ನಡ ಪ್ರಾದೇಶಿಕ ದಿನಪತ್ರಿಕೆ ಸಂಪಾದಕ ಮಾಯಪ್ಪ ಮಾವರಕರ್ (60) ಅವರು ನಿನ್ನೆ ನಿಧನರಾಗಿದ್ದಾರೆ.

# ಪ್ರಾಂತೀಯ ಪಕ್ಷಗಳನ್ನು ಒಗ್ಗೂಡಿಸಲು ಪ್ರಯತ್ನ



ಮುಂಬೈ, ಮೇ 4 – ಪ್ರಾಂತೀಯ ಪಕ್ಷಗಳನ್ನು ಒಗ್ಗೂಡಿಸಿ ಸಂಯುಕ್ತ ರಂಗವೊಂದನ್ನು ರಚಿಸಲು ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಮುಂದಾಗಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿರುವ ಎನ್.ಸಿ.ಪಿ. ವಕ್ತಾರ ಹಾಗೂ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್, ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರತಿಪಕ್ಷಗಳಲ್ಲಿ ಒಗ್ಗಟ್ಟಿನ ಅಗತ್ಯ ಇದೆ ಎಂದು ಹೇಳಿರುವುದನ್ನು ಪ್ರಸ್ತಾಪಿಸಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಮತಾರ ತೃಣಮೂಲ ಕಾಂಗ್ರೆಸ್ ಪಕ್ಷ ಭರ್ಜರಿ ಜಯ ಗಳಿಸಿತ್ತು.

ಬಂಗಾಳ ಚುನಾವಣೆಗೆ ಮುಂಚೆ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಶರದ್ ಪವಾರ್ ಪ್ರಯತ್ನ ನಡೆಸಿದ್ದರು. ಮುಂದಿನ ಕೆಲವು ದಿನಗಳಲ್ಲಿ ಅವರು ಪ್ರತಿಪಕ್ಷಗಳು, ವಿಶೇಷವಾಗಿ ಪ್ರಾಂತೀಯ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನ ನಡೆಸಲಿದ್ದಾರೆ ಎಂದು ಮಲಿಕ್ ಹೇಳಿದ್ದಾರೆ.

# ಶಿಥಿಲಾವಸ್ಥೆ ತಲುಪಿದ ವಾಹನವನ್ನು ಪುನಶ್ಚೇತನಗೊಳಿಸಿ

**ಓದುಗರ ಪತ್ರ**



ಮಾನ್ಯರೇ,

ಪ್ರಸ್ತುತ ಸಂದರ್ಭದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಹಲವಾರು ಜನರು ಸಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶವ ಸಾಗಾಟ ಮಾಡಲು ಸಂಬಂಧಿಕರು ಅಲೆದಾಡುವ ಸ್ಥಿತಿ ಉಂಟಾಗಿದೆ. ಅದರಿಂದ ಮಾನ್ಯ ಜಿಲ್ಲಾಡಳಿತ ಈ ಹಿಂದೆ ನಮ್ಮ ಮನವಿಗೆ ಸ್ಪಂದಿಸಿ ಆರೋಗ್ಯ ಸಚಿವರಾಗಿದ್ದ ಯು.ಟಿ. ಖಾದರ್ ಅವರು ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಾಯುವ ಕಡುಬಡವರ ಶವಗಳನ್ನು ಸಾಗಾಟ ಮಾಡಲು ಶ್ರದ್ಧಾಂಜಲಿ ಹೆಸರಿನಲ್ಲಿ ವಾಹನಗಳನ್ನು ನೀಡಿದ್ದರು. ಆದರೆ, ಪ್ರಸ್ತುತ ಶ್ರದ್ಧಾಂಜಲಿ ವಾಹನವು ಜಿಲ್ಲಾ ಆಸ್ಪತ್ರೆಯಲ್ಲಿ ಶವಾಗಾರದ ಮುಂದೆ ಶಿಥಿಲಾವಸ್ಥೆ ತಲುಪಿದ್ದು, ಅದನ್ನು ಪುನಶ್ಚೇತನಗೊಳಿಸಿ ಪ್ರಸ್ತುತ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**- ಪಿ.ಬಿ. ಅಂಜು ಕುಮಾರ್,**
ಸಾಮಾಜಿಕ ಕಾರ್ಯಕರ್ತರು, ದಾವಣಗೆರೆ.


# ದುಡ್ಡು ಕೊಟ್ಟವರಿಗೆ ಮಾತ್ರ ಬೆಡ್

**(1ನೇ ಪುಟದಿಂದ)** ಘಟಕಗಳಿಗೆ ಹಣ ಬಂದರೂ, ಘಟಕಗಳನ್ನು ಸ್ಥಾಪಿಸಿಲ್ಲ. ಅಧಿಕಾರಿಗಳ ನಿರ್ಲಕ್ಷದಿಂದ ಈ ರೀತಿ ಆಗುತ್ತಿದೆ. ಅವರನ್ನು ಮನೆಗೆ ಕಳಿಸದೇ ಇದ್ದರೆ ಅವರ ಶಾಪ ತಟ್ಟುತ್ತದೆ ಎಂದರು.

ವಾರ್ ರೂಂಗಳಲ್ಲಿ ಕೆಲಸ ಮಾಡುತ್ತಿರುವವರು ಅಧಿಕಾರಿಗಳಲ್ಲ. ಇದರ ಹೊಣೆಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಇದಕ್ಕೆ ಕಣ್ಣು ಮುಚ್ಚಿ ನೇಮಕ ಮಾಡುತ್ತಿರುವುದರಿಂದ ಬೆಂಗಳೂರು ಜನರ ಪ್ರಾಣ ಹೋಗುತ್ತಿದೆ. ಈ ಹುದ್ದೆಗಳಿಗೆ ಅಧಿಕಾರಿಗಳ ಸಂಬಂಧಿಗಳನ್ನೇ ನೇಮಿಸಲಾಗಿದೆ ಎಂದು ಆರೋಪಿಸಿದರು.

ಬೆಡ್ ಬ್ಲಾಕ್ ಅಷ್ಟೇ ಅಲ್ಲದೇ ರೆಮ್ಡಿಸಿವಿರ್ ಔಷಧಿಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದ ಇನ್ನೋರ್ವ ಶಾಸಕ ಉದಯ ಗರುಡಾಚಾರ್ ಹೇಳಿದರು.

# ಯೂನಿಟ್ ಗೆ 10 ಕೆ.ಜಿ. ಅಕ್ಕಿ ನೀಡಲು ಮನವಿ



ದಾವಣಗೆರೆ, ಏ.4- ರಾಜ್ಯ ಮತ್ತು ಕೇಂದ್ರ ಸರ್ಕಾರ ಪಡಿತರವನ್ನು ಒಂದು ಯೂನಿಟ್ ಗೆ 10 ಕೆ.ಜಿ.ಯಂತೆ ಉಚಿತ ವಿತರಣೆ ಮಾಡಲು ಕಾಂಗ್ರೆಸ್ ಮುಖಂಡರು, ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ ಒತ್ತಾಯಿಸಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ಲಾಕ್ ಡೌನ್ ಮಾಡಿದ್ದು, ಸರಿಯಾದ ಕ್ರಮವಾಗಿದೆ. ರಾಜ್ಯದಲ್ಲಿನ ಬಡವರಿಗೆ, ಪಡಿತರ ಫಲಾನುಭವಿಗಳಿಗೆ ಪ್ರತಿ ತಿಂಗಳು ಈ ಹಿಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ಯೂನಿಟ್ ಗೆ 7 ಕಿ.ಜಿ. ಅಕ್ಕಿಯನ್ನು ಉಚಿತವಾಗಿ ನೀಡ ಲಾಗುತ್ತಿತ್ತು. ಆದರೆ, ಈಗಿನ ಬಿಜೆಪಿ ಸರ್ಕಾರ ಬಡವರಿಗೆ ಉಚಿತವಾಗಿ ನೀಡುತ್ತಿದ್ದ ಅನ್ನಭಾಗ್ಯ ಯೋಜನೆಯ ಉಚಿತ ಅಕ್ಕಿಯನ್ನು 7 ಕೆ.ಜಿ. ಯಿಂದ 5 ಕೆ.ಜಿ.ಗೆ ಕಡಿತಗೊಳಿಸಲಾಗಿತ್ತು ಎಂದು ತಿಳಿಸಿದ್ದಾರೆ. ಮೇ ತಿಂಗಳಲ್ಲಿ ಕೋವಿಡ್ ಪ್ರಮಾಣ ಹೆಚ್ಚಳವಾಗಿದ್ದು, ಈ ಸಂದರ್ಭದಲ್ಲಿ ಲಾಕ್ ಡೌನ್ ಮಾಡಲಾಗಿದ್ದು, ಬಡವರು, ರೈತರು, ಕೂಲಿ ಕಾರ್ಮಿಕರು ಕೈಯ್ಯಲ್ಲಿ ಕೆಲಸವಿಲ್ಲದೆ ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರ ಉಚಿತ ಪಡಿತರ ಅಕ್ಕಿಯನ್ನು ಇಂತಹ ಕಷ್ಟಕರ ಸಮಯದಲ್ಲಿ 5 ಕೆ.ಜಿ.ಯಿಂದ 2 ಕೆಜಿಗೆ ಇಳಿಸಿ ಬಡವರ ಹೊಟ್ಟೆಯ ಮೇಲೆ ಬರೆಯನ್ನು ಹಾಕಿದ್ದಾರೆ. ಬಡವರನ್ನು ಹಸಿವಿನಿಂದ ಸಾಯುವಂತೆ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ರೈತ ಕೂಲಿ ಕಾರ್ಮಿಕರಿಗಾಗಿ ಈ ಹಿಂದಿನ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಡಲೇ ರೈತ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಿ ಕೂಲಿ ಕಾರ್ಮಿಕರ ಹಿತವನ್ನು ಕಾಪಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

# ಬ್ಲಾಕ್ ದಂಧೆಯ ವಿಧಾನ

**(1ನೇ ಪುಟದಿಂದ)** ಹಾಗೂ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಹೆಸರಿಗೆ ಬೆಡ್ ಬುಕ್ ಮಾಡುತ್ತಾರೆ. ಯಾರಾದರೂ ಹಣ ಕೊಟ್ಟರೆ, ಬೆಡ್ ಅನ್‌ಬ್ಲಾಕ್ ಆದ ತಕ್ಷಣವೇ ಅವರ ಹೆಸರನ್ನು ಸೇರ್ಪಡೆ ಮಾಡುತ್ತಾರೆ. ಐಸಿಯು, ಆಕ್ಸಿಜನ್ ಬೆಡ್ ಹಾಗೂ ವೆಂಟಿಲೇಟರ್ ಬೆಡ್‌ಗಳ ಬುಕ್ಕಿಂಗ್ ದಂಧೆಯಲ್ಲಿ ಆರೋಗ್ಯ ಮಿತ್ರ, ಖಾಸಗಿ ಆಸ್ಪತ್ರೆ, ವಾರ್ ರೂಂನಲ್ಲಿರುವವರು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದರಿಂದಾಗಿ ಸಾರ್ವಜನಿಕರು ಯಾವುದೇ ಸಮಯದಲ್ಲಿ ಬೆಡ್ ಕೇಳಿದರೂ ಸಿಗುವುದಿಲ್ಲ. ಆದರೆ, ದಂಧೆಕೋರರು ಸುಲಭವಾಗಿ ಹಣ ಪಡೆದು ಬೆಡ್‌ಗಳನ್ನು ಒದಗಿಸುತ್ತಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ. ಈ ರೀತಿ ಬ್ಲಾಕ್ ಮಾಡುವ ಬೆಡ್‌ಗಳನ್ನು ಶಾಸಕರು, ಸಂಸದರು, ನ್ಯಾಯಮೂರ್ತಿಗಳು ಸೇರಿದಂತೆ ಪ್ರಭಾವಿಗಳ ಶಿಫಾರಸ್ಸಿನ ಮೇಲೆ ವಿತರಿಸುವುದೂ ನಡೆದಿದೆ ಎಂದು ಸಂಸದ ಸೂರ್ಯ ತಿಳಿಸಿದ್ದಾರೆ.


## ಬೇಕಾಗಿದ್ದಾರೆ

**ಮಾನವ ಸಂಪನ್ಮೂಲ ಹೊರಗುತ್ತಿಗೆ ಮೂಲಕ ಕೋವಿಡ್-19 ವೈರಸ್ ಚಿಗಟೇರಿ ಜಿಲ್ಲಾ ಆಸ್ಪತ್ರೆಯೊಳಗೆ 6 ತಿಂಗಳ ಅವಧಿಗೆ ಡಿ ದರ್ಜೆಯ ಹುದ್ದೆಗೆ ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್ ಆದವರು ದೈಹಿಕವಾಗಿ ಬಲಿಷ್ಟವಾಗಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಾಧಾನ್ಯತೆ ನೀಡಲಾಗುವುದು. ಆಕರ್ಷಕ ವೇತನ ನೀಡಲಾಗುವುದು. ಆಸಕ್ತಿವುಳ್ಳವರು ಈ ಕೆಳಗಿನ ಕಛೇರಿಗೆ ದಾಖಲಾತಿಗಳೊಂದಿಗೆ ಭೇಟಿ ಮಾಡತಕ್ಕದ್ದು. ಈ ಹಿಂದೆ ಆಸ್ಪತ್ರೆಯೊಳಗೆ ಕಾರ್ಯನಿರ್ವಹಿಸಿದ ಸಿಬ್ಬಂದಿಗೆ ಅವಕಾಶವಿರುವುದಿಲ್ಲ.**

ಕಛೇರಿ ವಿಳಾಸ : **ಟಾರ್ಗೆಟ್ ಡಿಟೆಕ್ಟಿವ್ ಅಂಡ್ ಸೆಕ್ಯೂರಿಟಿ ಫೋರ್ಸ್**
**#30/31, ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್, ಚೇತನ ಹೋಟೆಲ್ ರೋಡ್, ದಾವಣಗೆರೆ.**
**ಮೊ.ಸಂ. 90364 51756, 96117 70028**

## 8ರಂದು ಮೈಸೂರು-ದಾನಪುರ್ ಬೇಸಿಗೆ ವಿಶೇಷ ರೈಲು

ದಾವಣಗೆರೆ, ಮೇ 4- ದಕ್ಷಿಣ ಪಶ್ಚಿಮ ರೈಲ್ವೆ ವಿಭಾಗದ ವತಿಯಿಂದ ಇದೇ ದಿನಾಂಕ 8 ರಂದು ಮೈಸೂರು-ದಾನಪುರ್ ಬೇಸಿಗೆ ವಿಶೇಷ ರೈಲನ್ನು (ಒಂದು ಟ್ರಿಪ್ ) ಓಡಿಸಲು ಕ್ರಮ ಕೈಗೊಂಡಿದ್ದು, ರೈಲು ಸಂಖ್ಯೆ 06216 ಮೈಸೂರಿನಿಂದ ಬೆಳಿಗ್ಗೆ 11 ಗಂಟೆಗೆ ಬಿಟ್ಟು, ಬೆಂಗಳೂರು ಕೆಎಸ್‌ಆರ್ ನಿಲ್ದಾಣದಿಂದ 13.25 ಗಂಟೆಗೆ ಆಗಮಿಸಲಿದೆ. ನಂತರ ಯಶವಂತಪುರ-14.00, ತುಮಕೂರು-14.52, ಅರಸೀಕೆರೆ-16.40, ಬೀರೂರು-17.35, ಚಿಕ್ಕಜಾಜೂರು-19.00, ದಾವಣಗೆರೆ-20.00, ಕೊಟ್ಟೂರು-21.50, ಹೊಸಪೇಟೆ-00.55, ತೋರಣಗಲ್ಲು-01.30, ಬಳ್ಳಾರಿ-02.20, ಗುಂತಕಲ್-03.20, ಮಾರ್ಗವಾಗಿ ದ್ರೋಣಾಚಲಂ, ನಂದ್ಯಾಲ, ನರಸರಾವ್‌ಪೇಟ್, ಗುಂಟೂರು, ವಿಜಯವಾಡ, ರಾಜಮಂಡ್ರಿ, ವಿಶಾಖಪಟ್ಟಣಂ, ಖುದ್ರಾ ರೋಡ್, ಭದ್ರಕ್, ಆದ್ರ, ಅಸನಸೋಲ್, ಮಧುಪುರ್ ಮಾರ್ಗವಾಗಿ ಬಿಹಾರ ರಾಜ್ಯದ ದಾನಪುರ್ ಕ್ಕೆ ಮರುದಿನ 20.45 ಕ್ಕೆ ತಲುಪಲಿದೆ.

ಈ ರೈಲು 20 ಬೋಗಿಗಳನ್ನು ಹೊಂದಿದ್ದು 14-ದ್ವಿತೀಯ ದರ್ಜೆ ಸ್ಲೀಪರ್, 04-ಸಾಮಾನ್ಯ ದ್ವಿತೀಯ ದರ್ಜೆ ಹಾಗೂ 02 ಲಗೇಜ್ ಬೋಗಿಗಳನ್ನು ಹೊಂದಿರುತ್ತದೆ. ಈ ರೈಲಿನ ಎಲ್ಲ ಸೀಟುಗಳನ್ನು ಕಾಯ್ದಿರಿಸಿದ ಸೇವೆಗೆ ಮಾತ್ರ ಒದಗಿಸಲಾಗುವುದು. ಸಾರ್ವಜನಿಕರು ಕೋವಿಡ್-19 ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತಪ್ಪದೇ ಪಾಲಿಸಬೇಕು ಎಂದು ಹುಬ್ಬಳ್ಳಿ ನೈರುತ್ಯ ರೈಲ್ವೆ ವಿಭಾಗದ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

## ಕೊರತೆ : ವಿವಿಧ ರೈಲುಗಳು ರದ್ದು

ದಾವಣಗೆರೆ, ಮೇ 04- ಪ್ರಯಾಣಿಕರ ಕೊರತೆಯ ಕಾರಣಕ್ಕಾಗಿ ನೈರುತ್ಯ ರೈಲ್ವೆ ವಿಭಾಗವು ವಿವಿಧ ವಿಶೇಷ ರೈಲುಗಳ ಸಂಚಾರವನ್ನು ಮುಂದಿನ ಆದೇಶದವರೆಗೆ ರದ್ದುಪಡಿಸಿದೆ. ಯಶವಂತಪುರ-ಬೀದರ್ (02671) ಮೇ 04 ರಿಂದ, ಬೀದರ್-ಯಶವಂತಪುರ (02672) ರೈಲು ಮೇ 05 ರಿಂದ ರದ್ದುಪಡಿಸಲಾಗಿದೆ.

ಅದೇ ರೀತಿ ಯಶವಂತಪುರ-ಲಾತೂರ್ (06583) ಮೇ 05 ರಿಂದ, ಲಾತೂರ್-ಯಶವಂತಪುರ (06584) ಮೇ 06 ರಿಂದ, ಬೆಂಗಳೂರು-ನಾಗರಕೊಯಿಲ್(07235) ಮೇ 05 ರಿಂದ, ನಾಗರಕೊಯಿಲ್-ಬೆಂಗಳೂರು (07236) ಮೇ 06 ರಿಂದ. ಬೆಂಗಳೂರು-ಶಿವಮೊಗ್ಗ (02089), ಶಿವಮೊಗ್ಗ-ಬೆಂಗಳೂರು (02090) ಮೇ 04 ರಿಂದ. ಯಶವಂತಪುರ- ಕಣ್ಣೂರ್ (06537) ಮೇ 04 ರಿಂದ, ಕಣ್ಣೂರ್-ಯಶವಂತಪುರ್ (06538) ಮೇ 05 ರಿಂದ. ಬೆಂಗಳೂರು-ಧಾರವಾಡ (07225) ಮೇ 04 ರಿಂದ, ಧಾರವಾಡ-ಬೆಂಗಳೂರು (07226) ಮೇ 05 ರಿಂದ ಮುಂದಿನ ಆದೇಶದವರೆಗೆ ರದ್ದುಪಡಿಸಲಾಗಿದೆ ಎಂದು ಹುಬ್ಬಳ್ಳಿ ನೈರುತ್ಯ ರೈಲ್ವೆ ವಿಭಾಗದ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

## ಕೊರೊನಾ : ಜನತೆಯ ಸಂಕಷ್ಟಕ್ಕೆ ರಾಜಕಾರಣಿಗಳು ಮುಂದಾಗಲಿ



ದಾವಣಗೆರೆ, ಮೇ 4- ಚುನಾವಣೆಗಳಲ್ಲಿ ಕೋಟಿಗಟ್ಟಲೆ ಹಣ, ಹೆಂಡ ಹಂಚುವ ರಾಜಕಾರಣಿಗಳು ಕೊರೊನಾದಿಂದ ಕಂಗೆಟ್ಟ ಜನತೆಗೆ ನೆರವು ನೀಡಲು ಮುಂದಾಗಬೇಕೆಂದು 'ಅವಾಂತರ' ಪತ್ರಿಕೆ ಸಂಪಾದಕರೂ ಆದ ಕೆಪಿಸಿಸಿ ಕಾರ್ಯದರ್ಶಿ ಹೆಚ್. ದುಗ್ಗಪ್ಪ ಆಗ್ರಹಿಸಿದ್ದಾರೆ.

ಚುನಾವಣಾ ಸಂದರ್ಭದಲ್ಲಿ ರಾಜಕಾರಣಿಗಳು ನೂರಾರು ಕೋಟಿ ಆಸ್ತಿಯ ಲೆಕ್ಕ ತೋರಿಸುತ್ತಾರೆ. ಆದರೆ ಈಗ ದೇಶದಲ್ಲಿ ಕೊರೊನಾದಿಂದ ಲಾಕ್‌ಡೌನ್ ಆಗಿದೆ. ಕೂಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ದಿನಗೂಲಿ ನೌಕರರು, ಕಟ್ಟಡ ಕಾರ್ಮಿಕರು, ಆಟೋ, ಟ್ಯಾಕ್ಸಿ ಚಾಲಕರು, ಸಣ್ಣ, ಮಧ್ಯಮ ಕೈಗಾರಿಕೆ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ತುತ್ತು ಅನ್ನಕ್ಕೂ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವ ಸಂಸದರು, ಶಾಸಕರು, ಸಚಿವರು ಎಷ್ಟೆಷ್ಟು ಹಣ ದಾನ ಮಾಡಿದ್ದಾರೆಂದು ಘೋಷಿಸಲಿ ಎಂದು ಹೇಳಿದ್ದಾರೆ.

ಎಷ್ಟು ಜನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಧನಸಹಾಯ ಅಥವಾ ಆಹಾರದ ಕಿಟ್ ವಿತರಿಸಿದ್ದಾರೆಂಬುದನ್ನು ಹೇಳಲಿ ಎಂದು ದುಗ್ಗಪ್ಪ ಸವಾಲೆಸೆದಿದ್ದಾರೆ.

ಯಾರದೋ ಹಣ ಅಥವಾ ಸರ್ಕಾರದ ಅನುದಾನದಲ್ಲಿ ಸಹಾಯ ಮಾಡಿ ಪ್ರಚಾರ ಗಿಟ್ಟಿಸಿಕೊಳ್ಳುವುದು ಎಷ್ಟು ಸರಿ ? ಎಂದು ಪ್ರಶ್ನಿಸಿದ್ದಾರೆ.

ಚುನಾವಣೆಯ ಹಿಂದಿನ ದಿನ ಕತ್ತಲ ರಾತ್ರಿಯಲ್ಲಿ ತೋರಿಸಿದ ಕರಾಮತ್ತನ್ನು ಈಗಿನ ಕೊರೊನಾ ಸಂದರ್ಭದಲ್ಲಿ ತೋರಿಸಿ ಹಣ ಖರ್ಚು ಮಾಡಲಿ ಎಂದಿದ್ದಾರೆ.

ಜನರಿಂದ ಜನರಿಗಾಗಿ, ಜನರಿಗೋಸ್ಕರ ಕೆಲಸ ಮಾಡುತ್ತೇವೆ ಎಂದು ಭಾಷಣ ಬಿಗಿದು, ಅಧಿಕಾರ ಗಿಟ್ಟಿಸಿಕೊಂಡು, ಹಣ ಲೂಟಿ ಮಾಡಿಕೊಂಡಿದ್ದರೂ ನೆರವಾಗದಿದ್ದರೆ, ಮುಂದಿನ ದಿನಗಳಲ್ಲಿ ಜನರೇ ಬುದ್ಧಿ ಕಲಿಸುತ್ತಾರೆ ಎಂದು ಹೇಳಿದರು.

## ಮತದಾನದ 15 ದಿನ ಮುನ್ನ ಕ್ಷೇತ್ರವಾರು ಮೀಸಲಾತಿ ನಿರ್ಧರಿಸಲಿ : ತೇಜಸ್ವಿ

ದಾವಣಗೆರೆ, ಮೇ 4- ಮತದಾನದ 15 ದಿನಗಳ ಮುನ್ನ ಜಿ.ಪಂ., ತಾ.ಪಂ., ಕ್ಷೇತ್ರವಾರು ಮೀಸಲಾತಿ ನಿರ್ಧರಿಸುವಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಉಪಾಧ್ಯಕ್ಷ ತೇಜಸ್ವಿ ವಿ.ಪಟೇಲ್ ಮನವಿ ಮಾಡಿದ್ದಾರೆ.

ಮೀಸಲಾತಿಯನ್ನು ಸದ್ಯದಲ್ಲೇ ಘೋಷಿಸಿದರೆ, ಆಕಾಂಕ್ಷಿಗಳ ಮತ್ತು ಹಣದ ಓಡಾಟ ನಿಧನಗತಿಯಲ್ಲಿ ಆರಂಭವಾಗಿ ಹಂತ ಹಂತವಾಗಿ ಹೆಚ್ಚಲಿದೆ ಎಂದು ಹೇಳಿದ್ದಾರೆ. ಚುನಾವಣಾ ಆಸಕ್ತರಿಗೆ ಕೋವಿಡ್ ಕೂಡ ಗಂಭೀರ ಅಲ್ಲ. ಹಾಗಾಗಿ ಮತದಾನದ 15 ದಿನದ ಮುನ್ನ ಕ್ಷೇತ್ರವಾರು ಮೀಸಲಾತಿ ನಿರ್ಧರಿಸಲು ಕೋರಿದ್ದಾರೆ.

# 5 ಲಕ್ಷ ಡೋಸ್ ರೆಮ್ಡಿಸಿವಿರ್, ರಾಟ್ ಕಿಟ್ ಖರೀದಿಗೆ ನಿರ್ಧಾರ

### ಖಾಸಗಿ ಆಸ್ಪತ್ರೆಗಳ ಸರ್ಕಾರಿ ಬೆಡ್ ದರ ಪರಿಷ್ಕರಣೆ : ಹೆಚ್ಚು ಹಣ ವಸೂಲಿ ಮಾಡಿದರೆ ಗೂಂಡಾ ಕಾಯ್ದೆ

ಬೆಂಗಳೂರು, ಮೇ 4 - ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರ ಪಡೆದುಕೊಂಡಿರುವ ಬೆಡ್ ದರ ಪರಿಷ್ಕರಣೆ, ಕೂಡಲೇ 5 ಲಕ್ಷ ರೆಮ್ಡಿಸಿವಿರ್ ಡೋಸ್ ಖರೀದಿ ಹಾಗೂ ಅಗತ್ಯವಿದ್ದಷ್ಟು ರಾಟ್ ಟೆಸ್ಟ್ ಕಿಟ್‌ಗಳನ್ನು ತಕ್ಷಣವೇ ಖರೀದಿ ಮಾಡುವ ಮಹತ್ವದ ನಿರ್ಧಾರಗಳನ್ನು ಕೋವಿಡ್ ಕಾರ್ಯಪಡೆಯ ಸಭೆಯಲ್ಲಿ ಕೈಗೊಳ್ಳಲಾಗಿದೆ.

ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಮಂಗಳವಾರ ಬೆಂಗಳೂರಿನಲ್ಲಿ ಕಾರ್ಯಪಡೆ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು, ರೆಮ್ಡಿಸಿವಿರ್ ಖರೀದಿಗೆ ಜಾಗತಿಕ ಟೆಂಡರ್ ಕರೆಯಿರಿ ಎಂದು ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಭೆಯಲ್ಲಿ ಸರ್ಕಾರ ಖಾಸಗಿ ಆಸ್ಪತ್ರೆಗಳಲ್ಲಿ ಹೊಂದಿರುವ ಹಾಸಿಗೆಗಳ ಪ್ರತಿದಿನದ ದರವನ್ನು ಪರಿಷ್ಕರಣೆ ಮಾಡುವ ನಿರ್ಧಾರವನ್ನೂ ಕೈಗೊಳ್ಳಲಾಯಿತು.

ಆಕ್ಸಿಜನ್‌ಯುಕ್ತ ಬೆಡ್ ದರವನ್ನು ದಿನಕ್ಕೆ 7,000 ದಿಂದ 8,000 ರೂ.ಗಳಿಗೆ ಹೆಚ್ಚಿಸಲಾಗಿದೆ. ಐಸಿಯುನಲ್ಲಿ ವೆಂಟಿಲೇಟರ್ ಹೊರತಾದ ಬೆಡ್ ದರವನ್ನು 8,500ರಿಂದ 9,750 ರೂ.ಗಳಿಗೆ ಹಾಗೂ ಐಸಿಯುನಲ್ಲಿ ವೆಂಟಿಲೇಟರ್ ಸಹಿತ ಬೆಡ್ ದರವನ್ನು 10,000ರಿಂದ 11,500 ರೂ.ಗಳಿಗೆ ಏರಿಸಲಾಗಿದೆ. ಹೊಸ ದರಗಳು ಯಾವಾಗಿನಿಂದ ಜಾರಿಗೆ ಬರುತ್ತವೆ ಎಂಬುದಕ್ಕೆ ಸರಕಾರ ಶೀಘ್ರವೇ ಆದೇಶ ಹೊರಡಿಸಲಿದೆ ಎಂದು ಡಿಸಿಎಂ ಸಭೆಯಲ್ಲಿ ಪ್ರಕಟಿಸಿದರು.

ಯಾವುದೇ ಖಾಸಗಿ ಆಸ್ಪತ್ರೆ ಬೆಡ್, ಔಷಧಿ, ಆಕ್ಸಿಜನ್, ರೆಮ್ಡಿಸಿವಿರ್ ಸೇರಿದಂತೆ, ಸರಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚಿನ ಹಣ ಸುಲಿಗೆ ಮಾಡಿದರೆ ಗೂಂಡಾ ಕಾಯ್ದೆ ಅಡಿಯಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಿಮಿನಲ್ ಪ್ರಕರಣ ದಾಖಲ ಮಾಡಲಾಗುವುದು ಎಂದು ಅಶ್ವತ್ಥನಾರಾಯಣ ಸ್ಪಷ್ಟ ಎಚ್ಚರಿಕೆ ನೀಡಿದರು.


ಖಾಸಗಿ ಆಸ್ಪತ್ರೆಗಳ ಬಿಲ್ ಬಾಕಿ ಇದ್ದರೆ ತಕ್ಷಣವೇ ಚುಕ್ತಾ ಮಾಡಿ. ಹಾಗೆಯೇ ಕೋವಿಡ್ ಯೋಧರಾಗಿ ಕೆಲಸ ಮಾಡುತ್ತಿರುವ ಯಾರ ವೇತನವೂ ತಡವಾಗಬಾರದು ಎಂದು ಮುಖ್ಯ ಕಾರ್ಯದರ್ಶಿಗಳಿಗೆ ಅಶ್ವತ್ಥನಾರಾಯಣ ಸೂಚನೆ ಕೊಟ್ಟರು.

ವ್ಯಕ್ತಿಯ ಸ್ಯಾಂಪಲ್ ಸ್ವೀಕರಿಸಿದ ಐದು ನಿಮಿಷಗಳಲ್ಲಿ ಫಲಿತಾಂಶ ಕೊಡುವ ರಾಟ್ ಕಿಟ್‌ಗಳನ್ನು ಎಷ್ಟು ಅಗತ್ಯವೋ ಅಷ್ಟೂ ಖರೀದಿ ಮಾಡಲು ನಿರ್ಧರಿಸಲಾಗಿದೆ.

ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಅಂತಿಮ ವರ್ಷ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಕೋವಿಡ್ ಕರ್ತವ್ಯಕ್ಕೆ ತಕ್ಷಣವೇ ನಿಯೋಜಿಸುವಂತೆ ಉಪ ಮುಖ್ಯಮಂತ್ರಿಗಳು ನಿರ್ದೇಶನ ನೀಡಿದ್ದಾರೆ.

ಸಭೆಯಲ್ಲಿ ಕಾರ್ಯಪಡೆ ಸದಸ್ಯರೂ ಸಚಿವರೂ ಆದ ಡಾ.ಕೆ.ಸುಧಾಕರ್, ಎಸ್.ಸುರೇಶ್ ಕುಮಾರ್, ಸಿ.ಸಿ.ಪಾಟೀಲ್ ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೆದ್ ಅಖ್ತರ್ ಸೇರಿದಂತೆ ಇತರ ಉನ್ನತ ಅಧಿಕಾರಿಗಳು ಇದ್ದರು.

## ತಾನು ಮಾಡಿದ ಉಪಕಾರ, ಬೇರೆಯವರು ಮಾಡಿದ ಅಪಕಾರ ಮರೆಯಬೇಕು : ಶರಣರು



### ರಂಜಾನ್ ಸ್ನೇಹಮಿಲನ ಆನ್ ಲೈನ್ ಕಾರ್ಯಕ್ರಮ

ಚಿತ್ರದುರ್ಗ, ಮೇ 4- ತಾನು ಬೇರೆಯವರಿಗೆ ಮಾಡಿದ ಉಪಕಾರ, ಬೇರೆಯವರು ನಮಗೆ ಮಾಡಿದ ಅಪಕಾರವನ್ನು ಮರೆಯಬೇಕು. ಎಲ್ಲ ಧರ್ಮಗಳಲ್ಲೂ ಕ್ಷಮಾಪಣೆ ಇದೆ. ನಾವು ಎಲ್ಲರ ಜೊತೆ ಸಹಭೋಜನ, ಸಹಚಿಂತನೆ ಮಾಡಿದಾಗ ಸಮೂಹ ಜೀವನಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ನುಡಿದರು.

ರಂಜಾನ್ ಪ್ರಯುಕ್ತ ಹೆಮ್ಮೆಯ ಯುಎಇ ಕನ್ನಡಿಗರು, ದುಬೈ ಸಂಯುಕ್ತ ಅರಬ್ ಸಂಸ್ಥಾನದ ವತಿಯಿಂದ ನಡೆದ ಸರ್ವಧರ್ಮ ರಂಜಾನ್ ಸ್ನೇಹಮಿಲನ ಮತ್ತು ಕೋವಿಡ್ ಮುಕ್ತ ವಿಶ್ವಕ್ಕಾಗಿ ಪ್ರಾರ್ಥನಾ ಸಭೆಯ ಸಾನ್ನಿಧ್ಯ ವಹಿಸಿ ಆನ್‌ಲೈನ್ ಮೂಲಕ ಶ್ರೀಗಳು ಚಿಂತನೆ ನೀಡಿದರು.

ಸಂತರು, ಪ್ರವಾದಿಗಳು ಸಂಕಷ್ಟ ಬಂದಾಗ ಬೀದಿಗೆ ಬರುತ್ತಾರೆ. ಅವರು ಅನ್ನ, ಆಹಾರ ಹಂಚುತ್ತಾರೆ. ಭಾರತೀಯರಿಗೆ ಶ್ರಾವಣ ಮೊದಲಾದವು ಪವಿತ್ರವಾದರೆ ಮುಸ್ಲಿಂ ಬಾಂಧವರಿಗೆ ಉಪವಾಸ ಮಾಡುತ್ತಾ ರಂಜಾನ್ ಆಚರಿಸುತ್ತಾರೆ. ಈ ತಿಂಗಳ ಪ್ರಾಮುಖ್ಯತೆ ಎಂದರೆ ಸಹಭೋಜನ. ಎಲ್ಲರನ್ನೂ ಅಂದರೆ, ವಿರೋಧಿಗಳನ್ನೂ ಸಹ ಆಮಂತ್ರಿಸುತ್ತಾರೆ. ಬಸವಣ್ಣನವರು ಅದನ್ನೇ ಹೇಳುತ್ತಾರೆ ಎಂದರು.

ಸದ್ಯದ ಪರಿಸ್ಥಿತಿಯು ಅಂತಃಪ್ರಜ್ಞೆ ಪ್ರೇರೇಪಿಸುವ ಮತ್ತು ಅನುಸಂಧಾನದ ಕಾಲ. ಕರೆದುಕೊಂಡು ಉಣ್ಣುವ ಕಾಲ. ಅಲ್ಲದೆ ಎಚ್ಚರಿಕೆಯ ಕಾಲವೂ ಹೌದು. ಯಾರು ಅಸಹಾಯಕರಾಗಿದ್ದಾರೆ, ಯಾರ ಬದುಕಿನಲ್ಲಿ ಅಸಹಾಯಕತೆ ಇದೆಯೋ ಅವರಿಗೆ ಸಹಾಯ ಹಸ್ತ ನೀಡಬೇಕು. ಶರಣರು, ಸಂತರು, ಸೂಫಿಗಳು ಕಷ್ಟಜೀವಿಗಳಿಗೆ ಸಹಾಯ ಹಸ್ತ ನೀಡುತ್ತಾರೆ.

ಮಸೀದಿ, ಮಂದಿರ, ಚರ್ಚ್, ಇಗರ್ಜಿಗಳಿಗೆ ಒಂದು ಜವಾಬ್ದಾರಿ ಇರುತ್ತದೆ. ನಮ್ಮ ಕಾಯಕ ಪೂಜೆಯಾಗಬೇಕು. ನಮಗೆ ದುಡಿದು ಉಣ್ಣುವವರು ಬೇಕು. ಪ್ರತಿಯೊಬ್ಬ ಮುಸ್ಲಿಂ ಬಾಂಧವರು ದುಡಿದು ಉಣ್ಣುತ್ತಾರೆ. ಧರ್ಮ ಎನ್ನುವುದು ಪರಮ ಪರಿಜ್ಞಾನ ಉಂಟು ಮಾಡುತ್ತದೆ. ನಾವೆಲ್ಲ ದೈನಂದಿನ ಜೀವನದಲ್ಲಿ ಶಾಂತಿ, ಸಹನೆ, ಸಾಮರಸ್ಯದಿಂದ ಜೀವಿಸೋಣ ಎಂದರು.

ಪದ್ಮಶ್ರೀ ಇಬ್ರಾಹಿಂ ಸುತಾರ, ಮಂಗಳೂರಿನ ಮೌಲಾನ ಸುಫಿಯಾನ್ ಸಖಾಫಿ, ಮೌಲಾನಾ ಅನೀಸ್ ಕೌಸರಿ, ಮಹಮ್ಮದ್ ಕುಂಞ, ಹಾಸನದ ಫಾದರ್ ಅಂತೋಣಿ, ಕೆಎನ್‌ಆರ್‌ಐನ ಡಾ. ಆರತಿ ಕೃಷ್ಣ, ದುಬೈನ ಖಲೀಲ್ ಕಾಸರಗೋಡು, ಮಹಮ್ಮದ್ ಮುಸ್ತಾಫ ಮತ್ತು ರಫೀಕ್ ಅಲಿ ಇನ್ನಿತರರಿದ್ದರು. ಮುಸ್ತಫಾ ನಾಡಗೀತೆ ಹಾಡಿದರು. ಪಲ್ಲವಿ ಸ್ವಾಗತಿಸಿದರು. ಮೊಹಮ್ಮದ್ ಅಸ್ಗರ್ ಸೋಂಪಾಡಿ ಕುರಾನ್ ಪಠಣ ಮಾಡಿದರು. ಸೈಯದ್ ಅಸ್ಗರ್ ಅಲಿ ಪ್ರಾರ್ಥಿಸಿದರು.

## ಆರೋಗ್ಯವಾಗಿರುವ ಪ್ರಯಾಣಿಕರ ಆರ್‌ಟಿ-ಪಿಸಿಆರ್ ಟೆಸ್ಟ್ ಬೇಡ

ನವದೆಹಲಿ, ಮೇ 4 – ಅಂತರರಾಜ್ಯ ಪ್ರಯಾಣಿಕರು ಆರೋಗ್ಯವಾಗಿದ್ದರೂ ಅವರನ್ನು ಆರ್.ಟಿ. - ಪಿ.ಸಿ.ಆರ್. ಪರೀಕ್ಷೆಗೆ ಒಳಪಡಿಸುವುದನ್ನು ಕೈ ಬಿಡಬೇಕು ಎಂದು ಐಸಿ.ಎಂ.ಆರ್. ಸಲಹೆ ನೀಡಿದೆ.

ಆರ್.ಎ.ಟಿ. ಇಲ್ಲವೇ ಆರ್.ಟಿ. - ಪಿಸಿ.ಆರ್.ನಲ್ಲಿ ಪಾಸಿಟಿವ್ ಬಂದ ವ್ಯಕ್ತಿಯನ್ನು ಇನ್ನೊಮ್ಮೆ ಆರ್.ಟಿ - ಪಿ.ಸಿ.ಆರ್. ಪರೀಕ್ಷೆಗೆ ಒಳಪಡಿಸಬಾರದು. ಕೊರೊನಾದಿಂದ ಗುಣವಾದವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವಾಗಲೂ ಪರೀಕ್ಷೆಯ ಅಗತ್ಯವಿಲ್ಲ ಎಂದು ಐ.ಸಿ.ಎಂ.ಆರ್. ಹೇಳಿದೆ.

ಪ್ರಯೋಗಾಲಯಗಳ ಮೇಲೆ ಟೆಸ್ಟ್ ಒತ್ತಡ ಹೆಚ್ಚಾಗಿರುವ ಕಾರಣದಿಂದಾಗಿ ಈ ಸೂಚನೆ ನೀಡಲಾಗಿದೆ. ಆರ್.ಎ.ಟಿ. ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವಂತೆಯೂ ತಿಳಿಸಲಾಗಿದೆ.

## ಕೂಡ್ಲಿಗಿ : ಸಿಡಿಲು ಬಡಿದು ಸಾವು

ಕೂಡ್ಲಿಗಿ, ಮೇ 4- ತಾಲ್ಲೂಕಿನ ಗುಂಡುಮುಣುಗು ಗ್ರಾಮ ಪಂಚಾಯ್ತಿಯ ನೆಲಬೊಮ್ಮನಹಳ್ಳಿಯಲ್ಲಿ ಇಂದು ಸಿಡಿಲು ಬಡಿದು ಇಬ್ಬರು ಸಾವನ್ನಪ್ಪಿದ್ದಾರೆ.

ಚಿನ್ನಾಪುರಿ (38) ಹಾಗೂ ಬ್ರಹ್ಮ(48) ಮೃತ ಪಟ್ಟ ದುರ್ದೈವಿಗಳಾಗಿದ್ದಾರೆ. ಇದೇ ವೇಳೆ ಜರ್ಮಲಿ ಗ್ರಾ.ಪಂ. ಹರುದಿ ಗ್ರಾಮದ ಗ್ರಾ.ಪಂ. ಮಾಜಿ ಸದಸ್ಯ ರಾಜಶೇಖರ್ (30) ಮೃತ ಪಟ್ಟಿದ್ದಾರೆ. ಅವರ ಜೊತೆಯಲ್ಲಿದ್ದ ಆರ್. ಪಾಲಾಕ್ಷ (16) ಮೂರ್ಛೆ ಹೋಗಿದ್ದು, ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಎಂ.ಬಿ. ಅಯ್ಯನಹಳ್ಳಿಯಲ್ಲಿ ಮನೆಯ ಮಾಳಿಗೆ ಮೇಲೆ ಹೊಗೆ ಗೂಡು ಮುಚ್ಚಲು ಹೋದ ಪತ್ರೆಪ್ಪ (37) ಎಂಬಾತ ಸಿಡಿಲು ಬಡಿದು ಮೃತಪಟ್ಟ ಘಟನೆ ನಡೆದಿದ್ದು, ತಾಲ್ಲೂಕಿನಲ್ಲಿ ಸಿಡಿಲಿಗೆ ನಾಲ್ವರು ಬಲಿಯಾಗಿದ್ದಾರೆ.

## ಜೈನ್‌ನಿಂದ ಕೋವಿಡ್ ಕೇರ್ ಸೆಂಟರ್

**ಬೆಡ್ - ಆಕ್ಸಿಜನ್ ಅಭಾವ ಹಿನ್ನೆಲೆ**

ದಾವಣಗೆರೆ, ಮೇ 4- ಬೆಡ್, ಆಕ್ಸಿಜನ್ ಅಭಾವದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಜೈನ ಸಮುದಾಯ ದವರಿಗೆ ಕೋವಿಡ್ ಕೇರ್ ಸೆಂಟರ್ ಸಿದ್ಧವಾಗಿದೆ.

ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆ ಆಸ್ಪತ್ರೆಗಳಲ್ಲಿ ಬೆಡ್ ಗಳ ಕೊರತೆ ಕಾಣಲಾಗುತ್ತಿದೆ. ಅದರಲ್ಲೂ ಬೆಣ್ಣೆನಗರಿ ದಾವಣಗೆರೆಯಲ್ಲಿ ಕೊರೊನಾ ಆರ್ಭಟಿಸುತ್ತಿದ್ದು, ಇಲ್ಲಿ ಸಹ ಬೆಡ್, ಆಕ್ಸಿಜನ್ ಅಭಾವ ಕಾಡುತ್ತಿದೆ.

ಈ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ನಗರದ ಆವರಗೆರೆ ರಸ್ತೆಯಲ್ಲಿರುವ ಜೈನ ಮಂದಿರದಲ್ಲಿ ಜೈನ ಸಮುದಾಯದವರಿಗೆ ಕೋವಿಡ್ ಕೇರ್ ಸೆಂಟರ್ ಸಿದ್ಧಪಡಿಸಲಾಗಿದೆ. ಸುಮಾರು 65ಕ್ಕೂ ಹೆಚ್ಚು ಬೆಡ್, ಆಕ್ಸಿಮೀಟರ್, ಆಕ್ಸಿಜನ್, ಡಾಕ್ಟರ್, ನರ್ಸ್‌ಗಳನ್ನು ನೇಮಿಸಲಾಗಿದ್ದು, ಊಟದ ವ್ಯವಸ್ಥೆ ಕೂಡ ಉತ್ತಮ ರೀತಿಯಲ್ಲಿ ಮಾಡಲಾಗಿದೆ. ಕಳೆದ ಬಾರಿ ಕೋವಿಡ್ ವೇಳೆಯಲ್ಲೂ ಕೂಡ 100 ಬೆಡ್ ಗಳ ವ್ಯವಸ್ಥೆ ಮಾಡಲಾಗಿತ್ತು. ನೂರಾರು ಕೋವಿಡ್ ರೋಗಿಗಳು ಚಿಕಿತ್ಸೆ ಪಡೆದು ಗುಣಮುಖರಾಗಿ ಹೋಗಿದ್ದಾರೆ.

ಪ್ರತಿಯೊಂದು ಸಮುದಾಯದವರು ಇದೇ ರೀತಿಯಾಗಿ ಕೋವಿಡ್ ಕೇರ್ ಸೆಂಟರ್ ನಿರ್ಮಾಣ ಮಾಡಿದರೆ ಆಸ್ಪತ್ರೆಗಳನ್ನು ಸುತ್ತುವ, ಸರ್ಕಾರವನ್ನು ಅವಲಂಬಿಸುವ ಪ್ರಮೇಯವೇ ಬರುವುದಿಲ್ಲ.

## ಇಂದಿನಿಂದ ಸರಕು ಸಾಗಣೆ ಸ್ಥಗಿತ

ದಾವಣಗೆರೆ, ಮೇ 04- ಪೊಲೀಸರ ಕಿರುಕುಳ ಹಾಗೂ ಅಗತ್ಯ ಸೇವೆಗಳ ಕೊರತೆ ಹಿನ್ನೆಲೆಯಲ್ಲಿ ನಾಳೆ ದಿನಾಂಕ 5 ರಿಂದ ಎಲ್ಲಾ ರೀತಿಯ ಸರಕು ಸಾಗಣೆ ಸ್ಥಗಿತಗೊಳಿಸಲಾಗುವುದು ಎಂದು ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘ ತಿಳಿಸಿದೆ.

ರಾಜ್ಯ ಸರ್ಕಾರ ಲಾಕ್‌ಡೌನ್ ಸಮಯದಲ್ಲಿ ಕೃಷಿ ಚಟುವಟಿಕೆ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಜನಸಾಮಾನ್ಯರಿಗೆ ತೊಂದರೆ ಆಗದಂತೆ ಅಗತ್ಯ ವಸ್ತುಗಳ ಸಾಗಣೆಗೆ ಅನುಮತಿಸಿದೆ. ಆದರೂ ಸರಕು ಸಾಗಣೆ ಸಂದರ್ಭದಲ್ಲಿ ಜಿಲ್ಲೆ ಮತ್ತು ಹೊರ ಜಿಲ್ಲೆಯಲ್ಲಿ ಪೊಲೀಸರು ತಪಾಸಣೆ ನೆಪದಲ್ಲಿ ಲಾರಿ ಚಾಲಕರು ಹಾಗೂ ಮಾಲೀಕರಿಗೆ ಕಿರುಕುಳ ನೀಡುವುದು ಮಾತ್ರ ತಪ್ಪಿಲ್ಲ.

ಕೇಂದ್ರ ಸರ್ಕಾರದ ಆದೇಶದಂತೆ 01.02.2020 ರಿಂದ 30.06.2021ರವರೆಗೆ ಯಾವುದೇ ರೀತಿಯ ವಾಹನದ ದಾಖಲೆ ತಪಾಸಣೆ ಮಾಡುವಂತಿಲ್ಲ ಎಂದು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೂಚಿಸಿದರೂ, ಪೊಲೀಸರು 200, 500, 1000 ರೂ.ಗಳ ದಂಡ ವಸೂಲಿ ಮಾಡುತ್ತಿದ್ದಾರೆ ಎಂದು ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಆರೋಪಿಸಿದ್ದಾರೆ.

ಲಾರಿಯವರು ತಮ್ಮ ಜೀವವನ್ನು ಪಣಕ್ಕಿಟ್ಟು ಸರಕು ಸಾಗಣೆ ಮಾಡುತ್ತಾರೆ. ಹೀಗಿರುವಾಗ ಲಾರಿಗಳು ರಿಪೇರಿಗೆ ಬಂದರೆ ಎಲ್ಲೂ ಕೂಡ ಪಂಚರ್ ಶಾಪ್, ಆಟೋಮೊಬೈಲ್, ಗ್ಯಾರೇಜ್ ತೆರೆದಿರುವುದಿಲ್ಲ. ಲಾರಿಗಳ ಓಡಾಟಕ್ಕೆ ಅಗತ್ಯವಾಗಿರುವ ಇಂತಹ ಸೇವೆಗಳಿಗೆ ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದರೂ ಸ್ಪಂದನೆ ಸಿಕ್ಕಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಮೇ 5 ರಿಂದ ಸರಕು ಸಾಗಣೆ ನಿಲ್ಲಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಸಿಡಿಲು : ರೈತರಿಬ್ಬರು ಸ್ಥಳದಲ್ಲೇ ಸಾವು





ದಾವಣಗೆರೆ, ಮೇ 4- ಜಿಲ್ಲೆಯಲ್ಲಿ ಇಂದು ಸಂಜೆ ಭಾರೀ ಗುಡುಗು, ಮಿಂಚು ಸಹಿತ ಮಳೆ ಸುರಿಯಿತು.

ಬಿಸಿಯಾಗಿದ್ದ ವಾತಾವರಣವನ್ನು ವರುಣ ದೇವ ತಂಪಾಗಿಸುವ ಜೊತೆಗೆ ಅವಾಂತರವನ್ನೇ ಸೃಷ್ಟಿಸಿದ್ದಾನೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಯುವ ರೈತರಿಬ್ಬರ ಜೀವಗಳನ್ನು ಬಲಿ ಪಡೆದ್ದಾನೆ.

ಸಂಜೆಯ ವೇಳೆ ಸಿಡಿಲು ಬಡಿದು ಮಾಯಕೊಂಡ ಬಳಿಯ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ವಡ್ಡರಹಟ್ಟಿಯ ರವಿಕುಮಾರ (32), ರಮೇಶ (30) ಸ್ಥಳದಲ್ಲೇ ಅಸುನೀಗಿದ್ದಾರೆ. ಗುಡ್ಡದ ಜಮೀನಿನಲ್ಲಿ ಮುಂಗಾರು ಬಿತ್ತನೆಗಾಗಿ ಕಲ್ಲುಗಳನ್ನು ಆರಿಸಿ, ಹೊಲವನ್ನು ಸ್ವಚ್ಛಗೊಳಿಸುತ್ತಿದ್ದರು. ಮಳೆ ಬಂದಿದ್ದರಿಂದ ಕೆರೆ ಏರಿ ಮೇಲಿರುವ ಮರದ ಕೆಳಗೆ ನಿಂತಿದ್ದರು. ಈ ಸಂಬಂಧ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪರಿಹಾರಕ್ಕೆ ಒತ್ತಾಯ:** ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲು ಬಡಿದು ಮೃತಪಟ್ಟ ಯುವ ರೈತರಾದ ರವಿಕುಮಾರ್, ರಮೇಶ್ ಕುಟುಂಬಕ್ಕೆ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಡಿ ತಕ್ಷಣವೇ ಪರಿಹಾರ ನೀಡಬೇಕು. ತಕ್ಷಣವೇ ಜಿಲ್ಲಾಡಳಿತ, ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ, ಮುಖಂಡ ವಿ.ಎನ್. ಪ್ರಕಾಶ್ ಇತರರು ಒತ್ತಾಯಿಸಿದ್ದಾರೆ.

## ನಗರಕ್ಕೆ ನಾಡಿದ್ದು ಉಸ್ತುವಾರಿ ಸಚಿವ



ದಾವಣಗೆರೆ, ಮೇ 4- ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಇದೇ ದಿನಾಂಕ 7ರಂದು ನಗರಕ್ಕೆ ಆಗಮಿಸಲಿದ್ದಾರೆ.

ಅಂದು 9.30 ಕ್ಕೆ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಬೆಳಿಗ್ಗೆ 10 ರಿಂದ 12 ಗಂಟೆವರೆಗೆ ಕೋವಿಡ್-19 ನಿಯಂತ್ರಣದ ಕುರಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಭವನದಲ್ಲಿ ಸಭೆ ನಡೆಸುವರು.

## ಹೊನ್ನಾಳಿ : 3 ಸಾವು 53 ದೃಢ

ಹೊನ್ನಾಳಿ, ಮೇ 4- ತಾಲ್ಲೂಕಿನ ಚಿಕ್ಕೇರಹಳ್ಳಿ, ಬಾಗೇವಾಡಿ, ಎಸ್. ಮಲ್ಲಾಪುರಗಳಲ್ಲಿ ಕೋವಿಡ್‌ನಿಂದ ಒಟ್ಟು ಮೂವರು ಸಾವನ್ನಪ್ಪಿರುವುದಾಗಿ ವರದಿಯಾಗಿದೆ.

ಇಂದು ಒಂದೇ ದಿನ ಹೊನ್ನಾಳಿ ಪಟ್ಟಣ ಸೇರಿದಂತೆ ತಾಲ್ಲೂಕಿನಲ್ಲಿ ಒಟ್ಟು 53 ಕೊರೊನಾ ಪಾಸಿಟಿವ್ ಬಂದಿರುವುದಾಗಿ ತಿಳಿದುಬಂದಿದೆ.

## ಆಕ್ಸಿಜನ್ ವೈಫಲ್ಯ: ಕಠಿಣ ಕ್ರಮ - ಸಿಎಂ

ಬೆಂಗಳೂರು, ಮೇ 4 - ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಸೋಂಕಿತರಿಗೆ ಸೂಕ್ತ ಸಮಯದಲ್ಲಿ ಆಕ್ಸಿಜನ್ ದೊರಕಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

## ಆಸ್ಪತ್ರೆಯಲ್ಲಿ ಬೆಡ್, ಆಕ್ಸಿಜನ್ ಸಿಗದೆ ಸತ್ತರೆ ಸರ್ಕಾರವೇ ಹೊಣೆ



ದಾವಣಗೆರೆ, ಮೇ 4- ಎಲ್ಲ ಮುಖ್ಯ ರಸ್ತೆಗಳಲ್ಲಿ ಸಾರ್ವಜನಿಕರಿಗೆ ದಂಡ ವಿಧಿಸಲಾಗುತ್ತಿದೆ..! ಹೆಲ್ಮೆಟ್ ಧರಿಸದೆ ಇದ್ದರೆ ಜೀವಕ್ಕೆ ಅಪಾಯ ಎನ್ನುವುದು ಅವರ ವಾದ. ಹಾಗೆಯೇ ಆಸ್ಪತ್ರೆಯಲ್ಲಿ ಆಕ್ಸಿಜನ್, ಬೆಡ್ ಸಿಗದೆ ಸತ್ತರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಆರೋಪಿಸಿದ್ದಾರೆ.

ದಂಡ ಹಾಕುವಾಗ ಇರುವ ಬದ್ಧತೆ ಆಸ್ಪತ್ರೆಯಲ್ಲಿ ಬೆಡ್ ಸಿಗದೆ ಇರುವಾಗ ಯಾಕಿಲ್ಲ..? ಮೆಡಿಕಲ್ ಎಮರ್ಜೆನ್ಸಿ ಅಂತಾ ಮನೆಯಿಂದ ಯಾರದ್ರೂ ಹೊರಗೆ ಹೋದ್ರೆ ದಂಡ ವಿಧಿಸಲಾಗುತ್ತಿದೆ.

ಮೊದಲೇ ಲಾಕ್‌ಡೌನ್‌ನಿಂದ ವ್ಯಾಪಾರ - ವಹಿವಾಟುಗಳು ಬಂದ್ ಆಗಿವೆ. ಬಡವರಿಗೆ, ಮಧ್ಯಮ ವರ್ಗದವರಿಗೆ ಜೀವನ ನಡೆಸುವುದು ಕಷ್ಟವಾಗಿದೆ. ಇನ್ನೂ ಕೆಲ ಬಡವರು ಊಟಕ್ಕೂ ಪರದಾಡ್ತಾ ಇದ್ದಾರೆ. ಆದ್ರೆ ಇವರಿಗೆ ಮಾತ್ರ ದಂಡ ಕಟ್ಟಬೇಕು.

ಹಲವಾರು ನಗರಗಳಲ್ಲಿ ಸಾರ್ವಜನಿಕರು ಹೆಲ್ಮೆಟ್ ಧರಿಸುವುದಿಲ್ಲ. ಆದರೆ ನಮ್ಮ ದಾವಣಗೆರೆ ಮಾತ್ರ ಇವರಿಗೆ ವಿಶೇಷ ಅನ್ಸುತ್ತೆ ? ಇದು ನಮ್ಮ ದೇಶದ ವಿಪರ್ಯಾಸ ಎಂದು ದಿನೇಶ್ ಶೆಟ್ಟಿ ಹೇಳಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ : 05.05.2021 ಇಫ್ತೇಯಾರಿ ಸಮಯ : 6-49

ದಿನಾಂಕ 06.05.2021 ಸಹೇರಿ ಸಮಯ : 4-45


|| ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು || || ಶ್ರೀ ಮಹಾಕಾಳೇಶ್ವರ ಪ್ರಸನ್ನ ||

ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಇವರ ಕೃಪಾಶೀರ್ವಾಗಳೊಂದಿಗೆ

**ಗುರು-ಲಿಂಗ-ಜಂಗಮಾರಾಧನೆ ಆಹ್ವಾನ ಪತ್ರಿಕೆ**



ಜನನ : 19.10.1955 ನಿಧನ : 28.04.2021

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು, ಹಿರೇಕೆರೆಹಳ್ಳಿ ವಾಸಿ, ವಲಸೆಮಠದ ಶ್ರೀಮತಿ ಲಿಂ|| ಶರಣಮ್ಮ, ಶ್ರೀ ಲಿಂ|| ಕೆ. ಸಿದ್ದಯ್ಯ ಇವರ ಮಗನಾದ ಶ್ರೀ ಕೆ. ಶಿವಯ್ಯ ಶ್ರೀಮತಿ ಮಲ್ಲಮ್ಮ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 28-04-2021ನೇ ಬುಧವಾರ ಮಧ್ಯಾಹ್ನ 3-15 ಕ್ಕೆ ನನ್ನ ಅಣ್ಣನವರಾದ

**ಶ್ರೀ ಚಂದ್ರಶೇಖರ್ ಕೆ.**

ಕೆ.ಎಸ್.ಆರ್.ಟಿ.ಸಿ. ನಿವೃತ್ತ ನೌಕರ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಗುರು-ಲಿಂಗ-ಜಂಗಮಾರಾಧನೆ'ಯನ್ನು ದಿನಾಂಕ 06-05-2021ನೇ ಗುರುವಾರ ಬೆಳಿಗ್ಗೆ 9-30 ಘಂಟೆಗೆ 'ಶ್ರೀ ಮಹಾಕಾಳೇಶ್ವರ ಕೃಪ' ಕೊಟ್ಟೂರೇಶ್ವರ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಸಹೋದರಿ ಕು|| ಮಂಜುಳ ಬಿ.ಎಸ್. ದಾವಣಗೆರೆ


ಶ್ರೀಮತಿ ಮಧುರ ಕೆ.ಸಿ. ಶ್ರೀ ಪವನ್ ಕುಮಾರ್ ಪಿ.ಟಿ. ಚಿ|| ಪುನರ್ವ,

ವಲಸೆ ಮಠದ ವಂಶಸ್ಥರು, ಹಿರೇಕೆರೆಹಳ್ಳಿ ಗ್ರಾಮಸ್ಥರು

ಮೊ. : 9880663711, 7483172055



**ಪುಣ್ಯಸ್ಮರಣೆ**



ಜನನ : 08.06.1936

ನಿಧನ : 05.05.2015

**ಲಿಂ|| ಶರಣ ಶಾಮನೂರು ಬಕ್ಕೇಶಪ್ಪನವರು**

ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು....

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,

ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀಮತಿ ಶಾಂತಮ್ಮ ಬಕ್ಕೇಶಪ್ಪ ಶಾಮನೂರು

ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,

ಸಹೋದರರು, ಸಹೋದರಿಯರು

ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

**ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte